# ಪೌಲನು ತಿಮೊಥೆಯನಿಗೆ ಬರೆದ ಮೊದಲನೆಯ ಪತ್ರಿಕೆ

**ಗ್ರಂಥಕರ್ತ:**

ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು.

**ದಿನಾಂಕ:**

ಸುಮಾರು ಕ್ರಿ.ಶ. 64 ರಲ್ಲಿ

**ಧ್ಯೇಯ:**

ಪೌಲನು ಈ ಪತ್ರಿಕೆಯನ್ನು ಬರೆಯುವ ಸಮಯದಲ್ಲಿ ಕ್ರೈಸ್ತೀಯ ಸಭೆಗಳ ಸಂಖ್ಯೆ ಬಹಳವಾಗಿ ಅಭಿವೃದ್ಧಿಯಾಗಿತ್ತು ಮತ್ತು ವಿಶ್ವಾಸಿಗಳ ಸರಿಯಾದ ನಡವಳಿಕೆ, ಕ್ರಮ, ಕ್ರಮಶಿಕ್ಷಣ ಮತ್ತು ಸಭೆಗಳ ನಾಯಕತ್ವ, ಹಾಗೂ ಇವುಗಳಿಗೆ ಸಂಬಂಧಿಸಿದ ವಿಷಯಗಳೂ ಅವುಗಳೊಂದಿಗೆ ಅಭಿವೃದ್ಧಿಯಾಗಿದ್ದವು. ಪೌಲನು ಇವೆಲ್ಲವುಗಳ ಬಗ್ಗೆ ತಿಮೊಥೆಯನಿಗೆ ಎರಡು ಮತ್ತು ತೀತನಿಗೆ ಒಂದು ಪತ್ರಿಕೆಯನ್ನು ಬರೆದನು. ಅವನು ಯೇಸು ಕ್ರಿಸ್ತನ ಅಪೊಸ್ತಲನಾಗಿದ್ದನು ಮತ್ತು ಯೇಸು ಕ್ರಿಸ್ತನ ಅಧಿಕಾರದೊಂದಿಗೆ ಹಾಗೂ ಪವಿತ್ರಾತ್ಮನ ಪ್ರೇರಣೆಯೊಂದಿಗೆ ಬರೆದನು, ಆದ್ದರಿಂದ ಅವನು ಕೊಟ್ಟಿರುವ ಸೂಚನೆಗಳು ಮತ್ತು ಬೋಧನೆಗಳು ದೇವರ ಸತ್ಯಗಳಾಗಿವೆ ಹಾಗೂ ಎಲ್ಲಾ ಕಾಲಗಳಲ್ಲಿರುವ ಎಲ್ಲಾ ಸಭೆಗಳಿಗೆ ಅನ್ವಯವಾಗುತ್ತವೆ. 3:15 ಈ ಪತ್ರಿಕೆಯ ಮುಖ್ಯ ವಚನ ಎಂದು ನಾವು ಹೇಳಬಹುದು – "ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕು". ತಿಮೊಥೆಯನಿಗೆ ಬರೆದಿರುವ ಪತ್ರಿಕೆಯಲ್ಲಿ ಪೌಲನು ಮತ್ತೆಮತ್ತೆ ಸ್ವಸ್ಥ ಬೋಧನೆ ಮತ್ತು ಸರಿಯಾದ ಸೂಚನೆಗಳು ಸಭೆಗಳ ಮೇಲೆ ಆಕ್ರಮಣ ಮಾಡುವ ಸುಳ್ಳು ಹಾಗೂ ಮಾರಣಾಂತಿಕ ಬೋಧನೆಗಳಿಗೆ ಔಷಧಿ ಎಂದು ಹೇಳಿದ್ದಾನೆ.

# 1[1]

**1:1** *"ಅಪೊಸ್ತಲನು"*– ರೋಮಾ 1:1; ಗಲಾ 1:1.

*"ರಕ್ಷಕನು"*– ಇಲ್ಲಿ ಪೌಲನು ದೇವರೇ "ನಮ್ಮ ರಕ್ಷಕನು" ಎಂದು ಹೇಳಿದ್ದಾನೆ. ತೀತ 2:13 ರಲ್ಲಿ (ಮತ್ತು ಬೇರೆ ಸ್ಥಳಗಳಲ್ಲಿ) ಯೇಸು ಕ್ರಿಸ್ತನೇ "ನಮ್ಮ ರಕ್ಷಕನು" ಎಂದು ಹೇಳಿದ್ದಾನೆ. ಯೇಸು ಕ್ರಿಸ್ತನೇ ದೇವರು ಎಂಬದಕ್ಕೆ ಇದು ಮತ್ತೊಂದು ಪುರಾವೆಯಾಗಿದೆಯಲ್ಲವೇ?

ಯೆಶಾಯ 43:11 ನೋಡಿರಿ. ಯೇಸು ಕ್ರಿಸ್ತನೇ ದೇವರು ಎಂದು ತೋರಿಸುವ ಇತರೆ ವಚನಗಳಾದ ಫಿಲಿಪ್ಪಿ 2:6 ನೋಡಿರಿ.

*"ನಿರೀಕ್ಷೆ"*– ಅಂತಿಮ ರಕ್ಷಣೆಯ ವಿಶ್ವಾಸಿಯ ಭರವಸೆಗೆ ಯೇಸು ಕ್ರಿಸ್ತನು ಮಾತ್ರವೇ ಏಕೈಕ ಆಧಾರವಾಗಿದ್ದಾನೆ (ಕೊಲೊ 1:27; ರೋಮಾ 5:2). 2

**1:2** *"ತಿಮೊಥೆಯನು"*– ಅಪೊ 16:1.

*"ಕುಮಾರನು"*– ಆತ್ಮೀಕ ಕುಮಾರನು, ನಿಜ ಕುಮಾರನಲ್ಲ.

*"ಕರುಣೆ"*– ಪೌಲನು ಸಹಜವಾಗಿ "ಕರುಣೆ ಮತ್ತು ಕೃಪೆ" ಎಂದು ಬರೆದಿದ್ದಾನೆ (ರೋಮಾ 1:7). ತಿಮೊಥೆಯನಿಗೆ ಬರೆದಿರುವ ಎರಡು ಮತ್ತು ತೀತನಿಗೆ ಬರೆದಿರುವ ಒಂದು ಪತ್ರಿಕೆಯಲ್ಲಿ "ಕರುಣೆ" ಎಂಬ ಪದವನ್ನು ಸೇರಿಸಿದ್ದಾನೆ. ತಿಮೊಥೆ ಮತ್ತು ತೀತ ಯೇಸು ಕ್ರಿಸ್ತನ ಸೇವೆಯಲ್ಲಿ ಪೂರ್ಣಾವಧಿ ತೊಡಗಿಸಿಕೊಂಡಿದ್ದರು. ಇತರೆ ಕ್ರೈಸ್ತರಿಗಿಂತ ಹೆಚ್ಚಾಗಿ ಅಂಥವರಿಗೆ ಕರುಣೆ ಅವಶ್ಯವಾಗಿದೆಯೇ? ಯಾಕೋಬ 3:1 ನೋಡಿರಿ.

*"ನಮ್ಮ ಕರ್ತನು"*– ಲೂಕ 2:11; ಫಿಲಿಪ್ಪಿ 2:10-11 ರ ನೋಟ್ಸ್ ನೋಡಿರಿ. 3

**1:3** ಇದರಿಂದ ನಮಗೆ ಗೊತ್ತಾಗುವದೇನೆಂದರೆ ತಿಮೊಥೆಯನು ಎಫೆಸದಲ್ಲಿದ್ದ ಸಭೆಯ ನಾಯಕನಾಗಿದ್ದನು ಮತ್ತು ಬಹುಶಃ ಪ್ರಮುಖ ನಾಯಕನಾಗಿರಬಹುದು (ಅಲ್ಲಿದ್ದ ಸಭೆಯ ವಿಷಯಗಳ ಬಗ್ಗೆ ಪೌಲನು ಅವನಿಗೆ ಮಾತ್ರವೇ ಪತ್ರಿಕೆಯನ್ನು ಬರೆಯುತ್ತಾ ಇದ್ದನು). ಸಭೆಯಲ್ಲಿರುವ ಸುಳ್ಳು ಬೋಧನೆಗಳನ್ನು ನಿಷೇಧಿಸುವ ಅಧಿಕಾರ ಅವನಿಗಿತ್ತು. "ಬೇರೆ ಉಪದೇಶ" ಅಂದರೆ ಯೇಸು ಕ್ರಿಸ್ತನು ತನ್ನ ಅಪೊಸ್ತಲರಿಗೆ ಪ್ರಕಟಿಸಿದ ಸತ್ಯಕ್ಕೆ ವಿರುದ್ಧವಾದ ಉಪದೇಶ. ದೇವರು ಅವರಿಗೆ ಕೊಟ್ಟ ಅಧಿಕಾರದಿಂದ ಅಪೊಸ್ತಲರು ಈ ಸತ್ಯವನ್ನು ಕಲಿಸಿದ್ದರು ಮತ್ತು ಕ್ರೈಸ್ತರೆಲ್ಲರೂ ಇದನ್ನು ನಂಬುವದು ಅತ್ಯಂತ ಪ್ರಾಮುಖ್ಯವಾದ ವಿಷಯವಾಗಿದೆ (4:16; ಗಲಾ 1:6-12; ರೋಮಾ 6:17; ಯೂದ 3 ರೊಂದಿಗೆ ಹೋಲಿಸಿ ನೋಡಿರಿ). ದೇವರು ಸಭಾಪಾಲಕರನ್ನು ಮತ್ತು ಸಭಾಧ್ಯಕ್ಷರನ್ನು ಮೇಲ್ವಿಚಾರಕರನ್ನು ನೇಮಿಸಿದ್ದಾನೆ (ಅಪೊ 20:28-31). ತಮ್ಮ ಪಾಲನೆಯಲ್ಲಿರುವ ಕ್ರೈಸ್ತರಿಗೆ ದೇವರು ಪ್ರಕಟಿಸಿರುವ ಸತ್ಯಕ್ಕೆ ವಿರುದ್ಧವಾದ ಬೋಧನೆಯನ್ನು ಕಲಿಸುವಂತೆ ಅವರು ಅನುಮತಿಸಬಾರದು. ಒಂದುವೇಳೆ ಅವರು ಅನುಮತಿಸಿದರೆ, ಅವರು ನಂಬಿಕೆ ದ್ರೋಹಿಗಳಾಗಿರುತ್ತಾರೆ ಮತ್ತು ಸಭೆಗಳಿಗೆ ದೊಡ್ಡ ಕೇಡನ್ನುಂಟು ಮಾಡುತ್ತಾರೆ. ಇಂದಿನ

ಕ್ರೈಸ್ತರು, ಮೊದಲನೇ ಶತಮಾನದ ಕ್ರೈಸ್ತರ ಹಾಗೆ ಅಪೊಸ್ತಲರ ಬೋಧನೆ ಕೇಳುವದರಲ್ಲಿ ನಿರತರಾಗಿರಬೇಕು (ಅಪೊ 2:42). ತೀತ ಮತ್ತು ತಿಮೊಥೆಯನಿಗೆ ಬರೆದಿರುವ ಮೂರು ಪತ್ರಿಕೆಗಳಲ್ಲಿ ಸ್ವಸ್ಥ ಬೋಧನೆ ಮತ್ತು ಉಪದೇಶಕ್ಕೆ ಹೆಚ್ಚು ಆದ್ಯತೆಯನ್ನು ಕೊಡಲಾಗಿದೆ – ವ 10; 4:6,13,16; 5:17; 6:1,3; 2 ತಿಮೊ 3:10,16; 4:2-3; ತೀತ 1:9; 2:1,7,10. **4**

**1:4** *"ಕಲ್ಪನಾಕಥೆಗಳೂ ಕೊನೆಮೊದಲಿಲ್ಲದ ವಂಶಾವಳಿಗಳು"*– ಪೌಲನು ಸತ್ಯವೇದದಲ್ಲಿ ಇಲ್ಲದಿರುವ ಕಲ್ಪನಾ ಕಥೆಗಳು ಮತ್ತು ವಂಶಾವಳಿಗಳನ್ನು (ಬಹುಶಃ ಯೆಹೂದ್ಯರನ್ನು) ಸೂಚಿಸುತ್ತಾ ಇದ್ದಾನೆ. ತೀತ 1:14 ರೊಂದಿಗೆ ಹೋಲಿಸಿ ನೋಡಿರಿ.ಅಂಥ ಉಪದೇಶಗಳು ಭೂಲೋಕದ ಮೇಲೆ ದೇವರ ಸೇವೆಗೆ ಯಾವ ವಿಧದಲ್ಲಿಯೂ ಸಹಾಯ ಮಾಡುವದಿಲ್ಲ. ದೇವರ ವಾಕ್ಯವಾಗಿರುವ ಸತ್ಯವೇದವನ್ನು ನಂಬುವವರು ಮತ್ತು ಬೋಧಿಸುವವರು ಹಾಗೂ ಆತನ ವಾಕ್ಯಗಳನ್ನು ಕಲಿಸುವವರಿಂದ ಮಾತ್ರವೇ ದೇವರ ಕೆಲಸವು ನೆರವೇರುತ್ತದೆ. **5**

**1:5** *"ಪ್ರೀತಿ"*– ಪೌಲನು ಗ್ರೀಕ್ ಪದವನ್ನು ಉಪಯೋಗಿಸಿದ್ದಾನೆ ಅದರ ಅರ್ಥ ದೇವರು ಮಾನವರಿಗೆ ತೋರಿಸುವ ಮತ್ತು ತನ್ನ ಜನರಿಗೆ ಕೊಡುವ ಪ್ರೀತಿಯಾಗಿದೆ ("ಅಗಾಫೆ" – 1 ಕೊರಿಂಥ 13:1). ಯೇಸು ಕ್ರಿಸ್ತನು ತಮ್ಮನ್ನು ಪ್ರೀತಿಸಿದ ಹಾಗೆಯೇ ತಾವು ಇತರರನ್ನು ಪ್ರೀತಿಸಬೇಕೆಂಬದು ಪ್ರತಿಯೊಬ್ಬ ವಿಶ್ವಾಸಿಯ ಗುರಿಯಾಗಿರಬೇಕು (ಯೋಹಾನ 13:34). ಈ ಪ್ರೀತಿ ಸಾಧಾರಣವಾದ ಮನುಷ್ಯನ ಭಾವನೆಯಲ್ಲ, ಅಶುದ್ಧತೆ ಮತ್ತು ಸ್ವಾರ್ಥಚಿಂತೆನೆಗೆ ಸಂಬಂಧಿಸಿಲ್ಲ.

*"ಶುದ್ಧ ಹೃದಯ"*– ಮತ್ತಾಯ 5:8; 1 ಪೇತ್ರ 1:22.

*"ಒಳ್ಳೇ ಮನಸ್ಸಾಕ್ಷಿ"*– ವ 19; 3:9; ಅಪೊ 23:1; 24:16. 4:2 ರೊಂದಿಗೆ ಹೋಲಿಸಿ ನೋಡಿರಿ.

*"ನಿಷ್ಕಪಟವಾದ ನಂಬಿಕೆ"*– ಗಲಾ 5:6; 1 ಕೊರಿಂಥ 2:4-5. ಇದು ಕಪಟಿಗಳಲ್ಲಿರುವ ನಾಟಕೀಯ ನಂಬಿಕೆಗೆ ವಿರುದ್ಧವಾದದ್ದಾಗಿದೆ. ಪೌಲನು ಇಲ್ಲಿ ಬರೆದಿರುವ ಮೂರು ವಿಷಯಗಳು ಇಲ್ಲದೆ ಹೋದರೆ ಪ್ರೀತಿ ಇರಬೇಕಾದ ಹಾಗೆ ಇರುವದಿಲ್ಲ, ಪ್ರೀತಿಯ ಹೆಸರಿಗೇ ಅದು ಅರ್ಹವಾಗಿರುವದಿಲ್ಲ. **6**

**1:6** 5 ನೇ ವಚನವು ಜನರು ಅನುಭವಿಸಬೇಕೆಂದು ದೇವರು ಬಯಸುವ ಕ್ರೈಸ್ತತ್ವದ

ಹೃದಯವನ್ನು ಕೊಡುತ್ತದೆ. ಇಂದು ದುಃಖಕರವಾದ ಸತ್ಯ ಸಂಗತಿ ಏನೆಂದರೆ ಕ್ರೈಸ್ತರೆಂದು ಹೇಳಿಕೊಳ್ಳುವ ಅನೇಕರು "ವ್ಯರ್ಥವಾದ ಮಾತುಗಳಿಗೆ" ಆದ್ಯತೆಯನ್ನು ಕೊಡುತ್ತಾ ಇದ್ದಾರೆ ಮತ್ತು ಪ್ರಾಮುಖ್ಯವಾದ ವಿಷಯಗಳನ್ನು ಕಡೆಗಣಿಸುತ್ತಾ ಇದ್ದಾರೆ. 7

**1:7** *"ಧರ್ಮೋಪದೇಶಕರಾಗಬೇಕೆಂದಿದ್ದಾರೆ"*– ಮಾನವರಿಂದ ಗೌರವ ಮರ್ಯಾದೆ ಪಡೆಯಬೇಕೆಂದು ಅವರು ಬಯಸುತ್ತಾರೆ. ಮತ್ತಾಯ 23:5-12; ಯಾಕೋಬ 3:1 ರೊಂದಿಗೆ ಹೋಲಿಸಿ ನೋಡಿರಿ. ಅವರು ಆತ್ಮೀಕವಾಗಿ ಅಮಾಯಕರಾಗಿದ್ದಾರೆ ಆದರೆ ಇತರರು ಅವರನ್ನು ಜ್ಞಾನಿಗಳೆಂದು ತಿಳಿದುಕೊಳ್ಳಬೇಕೆಂಬದಾಗಿ ಬಯಸುತ್ತಾರೆ. ತಮಗೆ ಅನೇಕ ವಿಷಯಗಳ ಬಗ್ಗೆ ಅಲ್ಪಸ್ವಲ್ಪವೇ ತಿಳಿದಿದ್ದರೂ ಅವುಗಳ ಬಗ್ಗೆ ಬಹಳ ಆತ್ಮವಿಶ್ವಾಸದಿಂದ ಹಾಗೂ ಧೈರ್ಯದಿಂದ ಮಾತನಾಡುತ್ತಾರೆ! 8

**1:8** *"ಧರ್ಮಶಾಸ್ತ್ರವು ಒಳ್ಳೆಯದು"*– ರೋಮಾ 7:12. ಒಳ್ಳೆಯ ದೇವರು ಅದನ್ನು ಒಳ್ಳೆಯ ಉದ್ದೇಶದಿಂದ ನಮಗೆ ಕೊಟ್ಟಿದ್ದಾನೆ. ಇಲ್ಲಿ "ಧರ್ಮಶಾಸ್ತ್ರ" –ಎಂದರೆ ದೇವರು ಮೋಶೆಯ ಮೂಲಕ ಕೊಟ್ಟಿರುವ ನಿಯಮಗಳಾಗಿವೆ (ವಿಮೋಚನಕಾಂಡ 20 ನೇ ಅಧ್ಯಾಯ). ಇದು ಒಳ್ಳೇದು ಆದರೆ ರಕ್ಷಣೆಯ ಮಾರ್ಗವಲ್ಲ ಮತ್ತು ಪರಿಶುದ್ಧರಾಗಿ ಜೀವಿಸಲು ಇದು ಶಕ್ತಿಯನ್ನು ಕೊಡುವದಿಲ್ಲ. ಜನರ ಬಾಯಿ ಮುಚ್ಚಿಸಲು (ರೋಮಾ 3:19-20) ಮತ್ತು ಅವರಿಗೆ ಯೇಸು ಕ್ರಿಸ್ತನನ್ನು ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವದನ್ನು ಮನವರಿಕೆ ಮಾಡಿಸಲು (ಗಲಾ 3:24-25) ದೇವರು ಇದನ್ನು ಉಪಯೋಗಿಸಿಕೊಳ್ಳುತ್ತಾನೆ. ಇದನ್ನು ಒಳ್ಳೆಯದೆಂದು ಹೇಳಲು ಅನೇಕ ಕಾರಣಗಳಿವೆಯಾದರೂ ಇದೊಂದು ಕಾರಣ ಸಾಕಾಗಿದೆ. ದೇವರು ಉಪಯೋಗಿಸುವ ಹಾಗು ಯೇಸು ಕ್ರಿಸ್ತನ ಸೇವಕರು ಇದರ ಉಪಯೋಗ ಮಾಡುವದನ್ನು ಕಲಿತುಕೊಳ್ಳಬೇಕು. 9

**1:9** *"ನೀತಿವಂತನು"*– ಪೌಲನ ಮಾತಿನ ಅರ್ಥ ಕರ್ತನಿಗೆ ಯೋಗ್ಯವಾದ ರೀತಿಯಲ್ಲಿ ಜೀವಿಸುವ ಕ್ರೈಸ್ತರು. ಅವರನ್ನು ತಡೆಯಲು ಅಥವಾ ಶಿಕ್ಷಿಸಲು ಅವರಿಗೆ ಧರ್ಮಶಾಸ್ತ್ರದ ಅವಶ್ಯಕತೆಯಿಲ್ಲ. (ದೇವರು ಬಯಸುವ ಹಾಗೆಯೇ) ಅವರು ತಮ್ಮಲಿಯೂ ಧರ್ಮಶಾಸ್ತ್ರದ ನೀತಿಯು ನೆರವೇರಲಿ ಎಂದು ಬಯಸುತ್ತಾರೆ (ರೋಮಾ 8:4). ಆದರೆ ದುಷ್ಟರ ವಿಷಯ ಬಹಳ ವ್ಯತ್ಯಾಸವಾಗಿದೆ. 11

**1:11** ಪೌಲನು ಸ್ವಸ್ಥ ಬೋಧನೆ ಎಂದರೆ ಏನು ಎಂಬದಾಗಿ ಹೇಳುತ್ತಿರುವದನ್ನು ಗಮನಿಸಿರಿ. ನಿಜವಾದ ಬೋಧೆಯು ಯೇಸು ಕ್ರಿಸ್ತನ ಸುವಾರ್ತೆಗೆ ಅನುಸಾರವಾಗಿರುತ್ತದೆ;

ಸುಳ್ಳು ಬೋಧನೆಯು ಅದಕ್ಕೆ ವಿರುದ್ಧವಾಗಿರುತ್ತದೆ.

*"ಮಹಿಮಾರ್ಥವಾದ ಸುವಾರ್ತೆ"*– 2 ಕೊರಿಂಥ 4:4 ರೊಂದಿಗೆ ಹೋಲಿಸಿ ನೋಡಿರಿ. ಮಾರ್ಕ 1:1; 1 ಕೊರಿಂಥ 15:1-8 ರ ನೋಟ್ಸ್ ನೋಡಿರಿ.

*"ಭಾಗ್ಯವಂತನಾದ ದೇವರು"*– 6:15. ಆತನಲ್ಲಿ ಸಮಾಧಾನ, ಸಂತೋಷ, ಪರಿಶುದ್ಧತೆ ಇತ್ಯಾದಿಗಳ ಆಶೀರ್ವಾದಗಳು ಅಪರಿಮಿತವಾಗಿವೆ, ಅದನ್ನು ಜನರು ಕ್ರಿಸ್ತನಲ್ಲಿ ಅನುಭವಿಸಬೇಕೆಂದು ಆತನು ಬಯಸುತ್ತಾನೆ.

*"ನನಗೆ"*– 1 ಕೊರಿಂಥ 9:17; ಗಲಾ 2:7. **12-17**

**1:12-17** "ಮಹಿಮಾರ್ಥವಾದ ಸುವಾರ್ತೆಯು" ತನ್ನ ಜೀವಿತದಲ್ಲಿ ಹೇಗೆ ಕಾರ್ಯಮಾಡಿತು ಎಂದು ಪೌಲನು ತೋರಿಸುತ್ತಾ ಇದ್ದಾನೆ ಮತ್ತು ಆ ಸುವಾರ್ತೆಯು "ಭಾಗ್ಯದಾಯಕನಾದ ದೇವರದ್ದಾಗಿರುವದಕ್ಕಾಗಿ" –ಆತನಿಗೆ ಕೃತಜ್ಞತೆ ಹಾಗೂ ಮಹಿಮೆಯನ್ನು ಸಲ್ಲಿಸುತ್ತಾ ಇದ್ದಾನೆ. ಸುವಾರ್ತೆಯು ರಕ್ಷಣೆಗೆ ನಡೆಸುವ ದೇವರ ಶಕ್ತಿಯಾಗಿದೆ – ರೋಮಾ 1:16 ಎಂಬದನ್ನು ಅವನು ತನ್ನ ಸ್ವಂತ ಅನುಭವದಿಂದ ತಿಳಿದುಕೊಂಡಿದ್ದನು. ತಾನು ಅನುಭವಿಸದಿರುವ ಸತ್ಯವನ್ನು ಇತರರೊಂದಿಗೆ ಹಂಚಿಕೊಳ್ಳಲು ಅವನು ಪ್ರಯತ್ನಿಸಲಿಲ್ಲ (ಆದರೆ ಕೆಲವರು ಇಂದು ಹಾಗೆ ಪ್ರಯತ್ನಿಸುತ್ತಾ ಇದ್ದಾರೆ). **12**

**1:12** *"ಸ್ತೋತ್ರ ಸಲ್ಲಿಸುತ್ತೇನೆ"*– ಎಫೆ 5:20; 1 ಥೆಸ 5:18; ಕೀರ್ತನೆ 7:17; 50:14-15; 56:12; ಯಾಜಕ 7:12-13.

*"ನನ್ನನ್ನು ಬಲಪಡಿಸಿದನು"*– ಕೊಲೊ 1:11,29; ಫಿಲಿಪ್ಪಿ 4:13; ಎಫೆ 3:16; 6:10; 2 ಕೊರಿಂಥ 12:9-10.

*"ನಂಬಿಗಸ್ತನು"*– ಇದರ ಅರ್ಥ ಯೇಸು ಕ್ರಿಸ್ತನು (ತನ್ನ ಭವಿಷ್ಯದ್ ಜ್ಞಾನದಲ್ಲಿ) ಪೌಲನು ನಂಬಿಗಸ್ತನೆಂದು ಪರಿಗಣಿಸಿದನು ಮತ್ತು ಅವನನ್ನು ಅಪೊಸ್ತಲನನ್ನಾಗಿ ನೇಮಿಸಿದನು. ಯೇಸು ಕ್ರಿಸ್ತನ ಸೇವೆಯಲ್ಲಿಯೂ ನಂಬಿಗಸ್ತರಾಗಿರಬೇಕು ಮತ್ತು ಭರವಸೆಯುಳ್ಳವರಾಗಿರಬೇಕು ಎಂಬದಕ್ಕೆ ಹೆಚ್ಚಿನ ಆದ್ಯತೆಯನ್ನು ಸತ್ಯವೇದವು ಕೊಡುತ್ತದೆ (ಮತ್ತಾಯ 24:45; 25:21; ಲೂಕ 16:10-12; 1 ಕೊರಿಂಥ 4:2). ಎಲ್ಲಾ ರೀತಿಯ ಅಬದ್ಧ ಪ್ರಮಾಣಿಕತೆ ಮತ್ತು ಅಕ್ರಮ ಯೇಸು ಕ್ರಿಸ್ತನಿಗೆ ಇಷ್ಟವಿಲ್ಲದ್ದಾಗಿದೆ. **13**

**1:13** *"ದೂಷಕನು"*– ಯೇಸು ಕ್ರಿಸ್ತನು ದೇವಕುಮಾರನು, ರಕ್ಷಕನು ಎಬದನ್ನು ಅವನು

ನಿರಾಕರಿಸುತ್ತಾ ಇದ್ದನು, ಇದು ದೇವರಿಗೆ ವಿರುದ್ಧವಾದ ದೂಷಣೆಯಾಗಿದೆ (ಮತ್ತಾಯ 9:3 ರ ನೋಟ್ ನೋಡಿರಿ).

*"ಹಿಂಸಕನು"*– ಅಪೊ 8:1-3; 9:1-2; 22:4-5; 1 ಕೊರಿಂಥ 15:9-10; ಗಲಾ 1:13; ಫಿಲಿಪ್ಪಿ 3:6.

*"ಬಲಾತ್ಕಾರಿ"*– ಗ್ರೀಕ್ ಪದವು ಅಹಂಕಾರಿಯಾಗಿ, ಇತರರನ್ನು ತನ್ನ ಮಾತುಗಳು ಅಥವಾ ಕ್ರಿಯೆಗಳು ಅಥವಾ ಎರಡರಿಂದಲೂ ತೊಂದರೆಪಡಿಸುವ ಅವಮಾನಪಡಿಸುವಂಥ ವ್ಯಕ್ತಿಯನ್ನು ಸೂಚಿಸುತ್ತದೆ.

*"ನನಗೆ ಕರುಣೆ ಉಂಟಾಯಿತು"*– ಅವನಿಗೆ ಕರುಣೆ ಬೇಕಾಗಿತ್ತು, ಎಲ್ಲಾ ಮಾನವರಿಗೂ ಕರುಣೆ ಬೇಕಾಗಿದೆ (ಲೂಕ 18:13; ರೋಮಾ 3:9,19; ತೀತ 3:3-5), ದೇವರು ಸಂತೋಷದಿಂದ ಕರುಣೆ ತೋರಿಸಲು ಬಯಸುವವನಾಗಿದ್ದಾನೆ (ರೋಮಾ 11:32; ಎಫೆ 2:4; ಮೀಕ 7:8).

*"ಅವಿಶ್ವಾಸಿಯಾಗಿ ತಿಳಿಯದೆ"*– ಅಪೊ 26:9; 23:1 ನೋಡಿರಿ. ಯೇಸು ಕ್ರಿಸ್ತನನ್ನು ಹಿಂಬಾಲಿಸುವವರನ್ನು ಹಿಂಸೆಪಡಿಸುವ ಮೂಲಕ ತಾನು ಒಳ್ಳೆಯ ಕಾರ್ಯ ಮಾಡುತ್ತಿದ್ದೇನೆಂದು ಪೌಲನು ಅಂದುಕೊಂಡಿದ್ದನು (ಯೋಹಾನ 16:2 ರೊಂದಿಗೆ ಹೋಲಿಸಿ ನೋಡಿರಿ). ದೇವರು ತನಗೆ ಕೊಟ್ಟ ಬೆಳಕನ್ನು ಅವನು ತಿಳಿದೇ ತಿರಸ್ಕರಿಸುತ್ತಾ ಇರಲಿಲ್ಲ ಅಥವಾ ತಾನು ಸತ್ಯವೆಂದು ಅಂದುಕೊಂಡದ್ದನು ಬೇಕೆಂದೇ ನಂಬಲು ನಿರಾಕರಿಸುತ್ತಾ ಇರಲಿಲ್ಲ. ಮಾನವರು ಬೇಕೆಂದು, ಮನಃಪೂರ್ವಕವಾಗಿಯೇ ಯೇಸು ಕ್ರಿಸ್ತನನ್ನು ಮತ್ತು ಆತನ ಸುವಾರ್ತೆಯನ್ನು ತಿರಸ್ಕರಿಸಿದರೆ ಅವರು ತಮ್ಮನ್ನು ಕರುಣೆಗೆ ದೊರೆಯದ ಅಪಾಯಕ್ಕೆ ಒಳಪಡಿಸಿಕೊಳ್ಳುತ್ತಾರೆ (ಮತ್ತಾಯ 12:22-34; ಇಬ್ರಿ 2:2-3; 6:4-8; 10:26-31; 12:25-29; ಜ್ಞಾನೋ 1:22-33 ನೋಡಿರಿ). **14**

**1:14** *"ಕೃಪೆ"*– ಯೋಹಾನ 1:14,16; ರೋಮಾ 1:7; 2 ಕೊರಿಂಥ 8:9.

*"ಅತ್ಯಧಿಕವಾದದ್ದು"*– ರೋಮಾ 5:20-21. ಯೇಸು ಕ್ರಿಸ್ತನಲ್ಲಿ ನಂಬಿಕೆ ಮತ್ತು ಪ್ರೀತಿಗಳಿವೆ. ಆತನ ಕೃಪೆ ಜನರಿಗೆ ಜನರಿಗೆ ಇವುಗಳನ್ನು ದೊರಕಿಸುತ್ತದೆ. ನಾವು ಆತನೊಂದಿಗೆ ಐಕ್ಯವಾಗಿದ್ದರೆ ಮಾತ್ರವೇ ಸುವಾರ್ತೆಯನ್ನು ಸತ್ಯವಾಗಿ ನಂಬಲು ಮತ್ತು ದೇವರನ್ನು ಪ್ರೀತಿಸಲು ಸಾಧ್ಯವಾಗುತ್ತದೆ. ಇವೆಲ್ಲವೂ ಯೇಸು ಕ್ರಿಸ್ತನಿಂದ ದೊರೆಯುವ ವರವಾಗಿವೆ

(ಫಿಲಿಪ್ಪಿ 1:29; ಎಫೆ 2:8; ಗಲಾ 5:22; ರೋಮಾ 5:5). **15**

**1:15** *"ನಂಬತಕ್ಕ ವಾಕ್ಯ"*– 3:1; 4:9; 2 ತಿಮೊ 2:11; ತೀತ 3:8.

*"ಯೇಸು ಕ್ರಿಸ್ತನು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ . . . ಬಂದನು"*– ಅವರನ್ನು ನಾಶಮಾಡಲು ಅಲ್ಲ – ಮತ್ತಾಯ 1:21; 9:13; ಲೂಕ 19:10; ಯೋಹಾನ 6:51; ರೋಮಾ 5:8. ನಾವೆಲ್ಲರೂ ಪಾಪಿಗಳಾಗಿದ್ದೇವೆ (ರೋಮಾ 3:9,19,23). ಒಂದುವೇಳೆ ಯೇಸು ಕ್ರಿಸ್ತನು ಈ ಲೋಕಕ್ಕೆ ಬರದೆ ಹೋಗಿದ್ದರೆ ಯಾರಿಗೂ ರಕ್ಷಣೆಯಾಗುತ್ತಲೇ ಇರಲಿಲ್ಲ (ಅಪೊ 4:12).

*"ನಾನೇ ಮುಖ್ಯನು"*– ಎಫೆ 3:8. ಪೌಲನು ಈ ಲೋಕದಲ್ಲಿ ಜೀವಿಸಿದ ಪರಿಶುದ್ಧ ಮತ್ತು ಪ್ರಸಿದ್ಧರೊಳಗೆ ಒಬ್ಬನಾಗಿದ್ದಾನೆ. ಆದರೆ ಈ ವಾಕ್ಯದಲ್ಲಿ ಅವನು ತನ್ನ ಬಗ್ಗೆ ಹೇಳಿಕೊಂಡಿದ್ದಾನೆ. "ಒಮ್ಮೆ ನಾನು ಮುಖ್ಯನಾಗಿದ್ದೆನು" ಎಂದು ಅವನು ಹೇಳಿಲ್ಲ ಬದಲಾಗಿ "ನಾನೇ ಮುಖ್ಯನು" ಎಂದು ಅವನು ಹೇಳಿದ್ದಾನೆ. ತಾನು ಪಾಪದ ಕೆಸರಿನಲ್ಲಿ ಇನ್ನೂ ಹೊರಳಾಡುತ್ತಿರುವದಾಗಿ ಮತ್ತು ಉಳಿದವರಿಗಿಂತ ಹೆಚ್ಚು ಕೆಟ್ಟ ಕಾರ್ಯಗಳನ್ನು ಮಾಡುತ್ತ ಇದ್ದೇನೆ ಎಂದು ಹೇಳಿಲ್ಲ. ಜನನದ ಸಮಯದಲ್ಲಿ ತನ್ನೊಂದಿಗೆ ಬಂದಿರುವ ಭ್ರಷ್ಟವಾದ ಸ್ವಭಾವದ ಕುರಿತಾದ ತನ್ನ ಮನವರಿಕೆಯನ್ನು ಮತ್ತು ಆ ಸ್ವಭಾವವು ಇನ್ನೂ ತನ್ನಲ್ಲಿರುವದನ್ನು ಅವನು ಪ್ರಕಟಿಸುತ್ತಾ ಇದ್ದಾನೆ (ಗಲಾ 5:16-17; ರೋಮಾ 7:18,25). ಆ ಸ್ವಭಾವವು ಅವನನ್ನು ಹಿಂದಿನ ಕಾಲದಲ್ಲಿ ಯಾವ ಕಾರ್ಯಗಳಿಗೆ ನಡೆಸುತ್ತಿದ್ದವು ಎಂಬದನ್ನು ಅವನು ಬಲ್ಲವನಾಗಿದ್ದನು ಮತ್ತು ಅತ್ಯಧಿಕವಾದ ಕೃಪೆ ಅವನನ್ನು ರಕ್ಷಿಸಿ, ರಕ್ಷಣೆಯ ಮಾರ್ಗದಲ್ಲಿ ನಡೆಸುತ್ತಾ ಇದೆ ಎಂಬದನ್ನೂ ಬಲ್ಲವನಾಗಿದ್ದನು. ನಮ್ಮ ಬಗ್ಗೆ ನಾವು ಏನು ಯೋಚಿಸುವವರಾಗಿದ್ದೇವೆ? ಈ ಪ್ರಶ್ನೆಗೆ ನಾವು ಕೊಡುವ ಉತ್ತರ ಅತ್ಯಂತ ಪ್ರಾಮುಖ್ಯವಾದದ್ದಾಗಿದೆ (ಲೂಕ 18:9-14). **16**

**1:16** ಕರುಣೆಯನ್ನು ತೋರಿಸಿ ಪಾಪಿಗಳಲ್ಲಿ ಮುಖ್ಯನಾದ ಪೌಲನನ್ನು ರಕ್ಷಿಸುವ ಮೂಲಕ, ತಾನು ಎಂಥಾ ಪಾಪಿಯನ್ನಾದರೂ ರಕ್ಷಿಸಬಲ್ಲನು ಎಂಬದನ್ನು ಯೇಸು ಕ್ರಿಸ್ತನು ತೋರಿಸಿದ್ದಾನೆ. ಅವನು ಬಹಳ ಕೆಟ್ಟವನು ಮತ್ತು ಯೇಸು ಕ್ರಿಸ್ತನ ಕೃಪೆ ಹಾಗೂ ಶಕ್ತಿಗೆ ಮೀರಿದವನು ಎಂದು ಯೋಚಿಸುವ ಮೂಲಕ ಯಾವನೂ ಚಿಂತಿಸಬಾರದು.

*"ಪೂರ್ಣ ದೀರ್ಘಶಾಂತಿ"*– 2 ಪೇತ್ರ 3:9,15. ಒಂದುವೇಳೆ ಯೇಸು ಕ್ರಿಸ್ತನು ಪಾಪಿಗಳು,

ದುರ್ಬಲರು, ಮೂರ್ಖರಾದ ಮಾನವರ ವಿಷಯದಲ್ಲಿ ದೀರ್ಘಶಾಂತನಾಗಿರದೆ ಹೋಗಿದ್ದರೆ ಯಾರೂ ರಕ್ಷಣೆ ಹೊಂದಲು ಆಗುತ್ತಾ ಇರಲಿಲ್ಲ.

*"ದೃಷ್ಟಾಂತ"*– ದೇವರು ಮಾನವರನ್ನು ಹೇಗೆ ರಕ್ಷಿಸುತ್ತಾನೆ ಎಂಬದಕ್ಕೆ ಪೌಲನು ದೃಷ್ಟಾಂತವಾಗಿದ್ದಾನೆ – ಇದು ಕೃಪೆ ಹಾಗೂ ಕರುಣೆಗೆ ಅರ್ಹರಲ್ಲದವರಿಗೆ ಅವುಗಳನ್ನು ತೋರುವ ಸಂಗತಿಗಳಾಗಿವೆ. ರಕ್ಷಣೆ ಹೊಂದಲು ನಾವು ಪೌಲನ ಹಾಗೆ ದೊಡ್ಡ ಬೆಳಕನ್ನು ನೋಡುವ ಅಥವಾ ಅವನಿಗಾದ ಅನುಭವವನ್ನು ಅನುಭವಿಸುವ ಅವಶ್ಯಕತೆಯಿಲ್ಲ ಆದರೆ ಅವನಿಗೆ ದೊರೆತ ಕೃಪೆ ಮತ್ತು ಕರುಣೆಯನ್ನು ಪಡೆಯುವವರಾಗಿರಬೇಕು.

*"ನಿತ್ಯಜೀವ"*– ಯೋಹಾನ 3:15-16. ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ಮಾತ್ರವೇ ಇದು ಹೊಂದಿಕೊಳ್ಳಬಹುದು (ಯೋಹಾನ 1:12-13; 3:36). **17**

**1:17** *"ಅರಸನು"*– ಕೀರ್ತನೆ 10:16; 24:10; 45:1; 47:2; ಪ್ರಕ 19:16.

*"ನಿರ್ಲಯನು"*– 6:16; ರೋಮಾ 1:23.

*"ಅದೃಶ್ಯನು"*– ಯೋಹಾನ 1:18.

*"ಆತನು ಮಾತ್ರವೇ ಜ್ಞಾನಿಯೂ, ಏಕದೇವರು"*– ರೋಮಾ 11:33; 16:27; 1 ಕೊರಿಂಥ 1:25; ಕೊಲೊ 2:2-3; ಯೂದ 25.

*"ಪ್ರಭಾವ"*– ಮಾನವರನ್ನು ಅವರ ಪಾಪಗಳಿಂದ ರಕ್ಷಿಸುವ ಮಾನಪ್ರಭಾವಗಳು ದೇವರಿಗೆ ಮಾತ್ರವೇ ಅವೆ, ಆತನಿಗೆ ಮಾತ್ರವೇ ಅವುಗಳಿರಬೇಕೆಂದು ಪೌಲನು ಬಯಸಿದನು. ಎಫೆ 1:6,12,14; 2:9 ರೊಂದಿಗೆ ಹೋಲಿಸಿ ನೋಡಿರಿ. **18**

**1:18** *"ಪ್ರವಾದನೆಗಳು"*– ರೋಮಾ 12:6; 1 ಕೊರಿಂಥ 12:28; 14:3. ಪುರಾವೆಯಾಗಿ ದೇವರು ತಿಮೊಥೆಯನನ್ನು ತನ್ನ ಸೇವೆಗೆ ಕರೆದಾಗ ಅವನು ಪೌಲನನ್ನು (ಅಥವಾ ಬೇರೆ ಪ್ರವಾದಿಯನ್ನು) ದೇವರ ಕರೆಯನ್ನು ಅರ್ಥಮಾಡಿಕೊಳ್ಳುವಂತೆ ಹಾಗೂ ಅದರ ಬಗ್ಗೆ ಮಾತನಾಡುವಂತೆ ಬಲಪಡಿಸಿದನು. ಅಪೊ 13:1-2 ರೊಂದಿಗೆ ಹೋಲಿಸಿ ನೋಡಿರಿ.

*"ದಿವ್ಯಯುದ್ಧ"*– 6:12; 2 ತಿಮೊ 4:7; ಎಫೆ 6:11. **19**

**1:19** ವಚನ 5. ನಂಬಿಕೆ ಮತ್ತು ಒಳ್ಳೆ ಮನಸ್ಸಾಕ್ಷಿಯ ನಡುವೆಯಿರುವ ಸಂಬಂಧವನ್ನು ಗಮನಿಸಿರಿ. ಅಂದರೆ ನಂಬಿಕೆ ಮತ್ತು ಪಾಪವನ್ನು ತಡೆಯುವದರ ನಡುವೆಯಿರುವ ವ್ಯತ್ಯಾಸ ತಿಳಿಯಿರಿ. ಒಳ್ಳೇ ಮನಸ್ಸಾಕ್ಷಿಯುಳ್ಳವರಾಗಿರಲು ಒಂದೇ ಮಾರ್ಗ ಮನಸ್ಸಾಕ್ಷಿ ಯಾವುದನ್ನು

ನಿಷೇಧಿಸುತ್ತದೆಯೋ ಅದರಿಂದ ದೂರವಿರುವದು.

*"ನಂಬಿಕೆಯ ವಿಷಯದಲ್ಲಿ ಹಡಗು ಒಡೆದವರಂತಿದ್ದಾರೆ"*– "ಅವರ" ನಂಬಿಕೆ – "ಅವರ" ಎಂಬ ಪದ ಗ್ರೀಕ್ ಭಾಷೆಯಲ್ಲಿ ಇಲ್ಲ. "ನಂಬಿಕೆಯು" ಕ್ರೈಸ್ತ ನಂಬಿಕೆಯ ದೇಹವಾಗಿದ್ದು ಅದನ್ನು ದೇವರು ಪ್ರಕಟಿಸಿದನು ಹಾಗೂ ಅಪೊಸ್ತಲರು ಕಲಿಸಿದರು. ಯಾವುದೇ ಪರಿಸ್ಥಿತಿಯಲ್ಲಾದರೂ ನಿಜವಾದ ವಿಶ್ವಾಸಿಗಳು ತಮ್ಮ ನಂಬಿಕೆಯ ಹಡಗು ಒಡೆದುಹೋಗಲು ಬಿಡುವದಿಲ್ಲ – ಇಬ್ರಿ 10:39; ಲೂಕ 22:31-32; ಯೋಹಾನ 10:27. ಆದರೆ ಕ್ರೈಸ್ತರೆಂದು ಹೇಳಿಕೊಳ್ಳುವ ಜನರು ನಂಬಿಕೆಯ ವಿಷಯವಾದ ಬೋಧನೆಗಳಲ್ಲಿ ಹಡಗು ನಷ್ಟಪಡುವ ಸ್ಥಿತಿಗೆ ಬರಬಹುದು ಮತ್ತು ಘೋರವಾದ ಅಪನಂಬಿಕೆಗೆ ಒಳಗಾಗಬಹುದು. **20**

**1:20** ಸಭೆಗಳಿಗೆ ಇವುಗಳ ವಿಷಯದಲ್ಲಿ ಎಚ್ಚರಿಕೆಯನ್ನು ಕೊಡುವಾಗ ಪೌಲನು ವ್ಯಕ್ತಿಗಳ ಹೆಸರುಗಳನ್ನು ಬಳಸಲು ಹಿಂಜರಿಯಲಿಲ್ಲ. ಹಾಗೆಯೇ 2 ತಿಮೊ 2:17; 4:14-15 ನೋಡಿರಿ.

*"ಇವರನ್ನು ಸೈತಾನನಿಗೆ ಒಪ್ಪಿಸಿದ್ದೇನೆ"*– 1 ಕೊರಿಂಥ 5:4-5 ರೊಂದಿಗೆ ಹೋಲಿಸಿ ನೋಡಿರಿ. 1 ಪೂರ್ವ 21:1; ಮತ್ತಾಯ 4:1-10; ಯೋಹಾನ 8:44 ರಲ್ಲಿ ಸೈತಾನನ ಕುರಿತಾದ ನೋಟ್ಸ್ ನೋಡಿರಿ. ಮತ್ತಾಯ 9:3 ರಲ್ಲಿ ದೂಷಣೆಯ ಕುರಿತಾದ ನೋಟ್ಸ್ ನೋಡಿರಿ.

# 2 1

**2:1** *"ವಿಜ್ಞಾಪನೆಗಳು . . . ಮನವಿಗಳು"*– 6:18; 5:20; ಫಿಲಿಪ್ಪಿ 4:6. ಪ್ರಾರ್ಥನೆಯ ವಿಷಯವಾಗಿ 1 ಥೆಸ 5:17 ನೋಡಿರಿ.

*"ಕೃತಜ್ಞತಾಸ್ತುತಿಗಳು"*– ಎಫೆ 5:20; ಕೊಲೊ 1:12; 2:7; 3:16; 4:2; 1 ಥೆಸ 5:18; ಯಾಜಕ 7:12-13; ಕೀರ್ತನೆ 7:17; 50:14-15; 56:12.

*"ಮನುಷ್ಯರೆಲ್ಲರು"*– ನಮ್ಮ ಪ್ರಾರ್ಥನೆಗಳು ಸ್ನೇಹಿತರು ಸಂಬಂಧಿಕರು ಎಂಬ ಚಿಕ್ಕ ವೃತ್ತದೊಳಗೆ ಸೀಮಿತವಾಗಿರಬಾರದು ಬದಲಾಗಿ ಲೋಕವ್ಯಾಪಿ ವಿಸ್ತಾರವಾಗಿರಬೇಕು. **2**

**2:2** ಅಧಿಕಾರಿಗಳಿಗಾಗಿ ಪ್ರಾರ್ಥನೆ ಮಾಡಿರಿ ಅವರನ್ನು ಟೀಕಿಸಬೇಡಿರಿ ಎಂದು ಪೌಲನು

ಹೇಳಿದ್ದಾನೆ. ಕ್ರೈಸ್ತ ವಿಶ್ವಾಸಿಗಳ ಪ್ರಾರ್ಥನೆಗಳು ದೇಶದಲ್ಲಿ ನಡೆಯುವ ಕಾರ್ಯಗಳ ಮೇಲೆ ಪ್ರಭಾವ ಬೀರುತ್ತವೆ ಎಂಬದನ್ನು ಅವನು ಇಲ್ಲಿ ಸೂಚಿಸಿದ್ದಾನೆ. ಅಧಿಕಾರದಲ್ಲಿರುವವರು ವಿಶ್ವಾಸಿಗಳಾಗದೆ ಇರುವಾಗ ಮತ್ತು ಅವರನ್ನು ವಿರೋಧಿಸುವಾಗ ಇದು ಸತ್ಯವಾಗಿರುತ್ತದೆ (ಅದು ಪೌಲನ ದಿನದಲ್ಲಿಯೂ ಸತ್ಯವಾಗಿತ್ತು). ಕೆಲವು ದೇಶಗಳಲ್ಲಿರುವ ವಿಶ್ವಾಸಿಗಳು ಯಾಕೆ ಸಮಾಧಾನದಿಂದ ಪ್ರಶಾಂತವಾಗಿ ಜೀವಿಸಲು ಯಾಕೆ ಆಗುತ್ತಿಲ್ಲವೆಂದರೆ ಅವರು ತಮ್ಮ ನಾಯಕರಿಗಾಗಿ ಹೇಗೆ ಪ್ರಾರ್ಥಿಸಬೇಕೋ ಹಾಗೆ ಪ್ರಾರ್ಥಿಸುವಲ್ಲಿ ವಿಫಲರಾಗುತ್ತಾ ಇದ್ದಾರೆ. 3

**2:3** ರಕ್ಷಣೆ ಹೊಂದಿಲ್ಲದಿರುವ ಮತ್ತು ರಕ್ಷಣೆ ಹೊಂದಿರುವ ಜನರಿಗಾಗಿ ಪ್ರಾರ್ಥಿಸುವದು ದೇವರಿಗೆ ಮೆಚ್ಚಿಕೆಯಾಗಿದೆ. ದೇವರಿಗೆ ಮೆಚ್ಚಿಕೆಯಾಗುವ ಕಾರ್ಯಗಳನ್ನು ವಿಶ್ವಾಸಿಗಳು ಆಸಕ್ತಿಯಿಂದ ಮಾಡಬೇಕು. 4

**2:4** ಲೋಕದಲ್ಲಿರುವ ಪ್ರತಿಯೊಬ್ಬರಿಗೂ ದೇವರ ಮನೋಭಾವನೆಯ ಸ್ಪಷ್ಟವಾದ ಹೇಳಿಕೆಯನ್ನು ಇಲ್ಲಿ ಕೊಡಲಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಯೇಸು ಕ್ರಿಸ್ತನ ಕುರಿತಾದ ಸತ್ಯವನ್ನು ಕಲಿತುಕೊಳ್ಳಬೇಕು ಮತ್ತು ಆತನ ರಕ್ಷಣೆಯನ್ನು ಹೊಂದಬೇಕು ಎಂಬದು ಆತನ ಬಯಕೆಯಾಗಿದೆ. 4:10; ಯೋಹಾನ 1:29; 3:16; ರೋಮಾ 11:32; 2 ಕೊರಿಂಥ 5:19; 2 ಪೇತ್ರ 3:9; 1 ಯೋಹಾನ 2:1; ಯೆಹೆಜ್ಕೇಲ 18:32 ರೊಂದಿಗೆ ಹೋಲಿಸಿ ನೋಡಿರಿ. ಪ್ರೀತಿಯ ಸ್ವಭಾವವುಳ್ಳವನಾಗಿರುವ ದೇವರಿಂದ ನಾವು ಇದನ್ನೇ ಎದುರುನೋಡಬಹುದಾಗಿದೆ (1 ಯೋಹಾನ 4:8). ಹೀಗಿರುವಾಗ ಅನೇಕ ಜನರು ಸತ್ಯವನ್ನು ತಿಳಿದುಕೊಳ್ಳಲು ಮತ್ತು ರಕ್ಷಣೆ ಹೊಂದಲು ಯಾಕೆ ವಿಫಲರಾಗುತ್ತಾರೆ? ಮತ್ತಾಯ 23:37; ಯೋಹಾನ 3:19-20; 5:40; 2 ಥೆಸ 2:10-12 ನೋಡಿರಿ. ಹಾಗೆಯೇ ರೋಮಾ 8:29 ರ ನೋಟ್ಸ್ ನೋಡಿರಿ. 5

**2:5** *"ದೇವರು ಒಬ್ಬನೇ"*– 1:17; 1 ಕೊರಿಂಥ 8:6; ಎಫೆ 4:6; ಯೆಶಾಯ 44:6,8; 45:5,18. ಯೇಸು ಕ್ರಿಸ್ತನು ತ್ರಯೇಕತ್ವದಲ್ಲಿ ಒಬ್ಬ ಸದಸ್ಯನಾಗಿದ್ದಾನೆ ಎಂದು ಪೌಲನು ಬೇರೆ ಸ್ಥಳಗಳಲ್ಲಿ ಕಲಿಸಿದ್ದಾನೆ – 1:1-2; ರೋಮಾ 8:9; 9:5; ಫಿಲಿಪ್ಪಿ 2:6,11; ಕೊಲೊ 1:15; 2:9; ತೀತ 2:13. ಆತನು ಖಂಡಿತವಾಗಿಯೂ ಆ ಸತ್ಯವನ್ನು ಇಲ್ಲಿ ನಿರಾಕರಿಸುತ್ತಾ ಇಲ್ಲ, ಬದಲಾಗಿ ವಾಕ್ಯವೆಂಬನಾಗಿದ್ದ ಯೇಸು ಕ್ರಿಸ್ತನು ಮಾಂಸಧಾರಿಯಾಗಿ ಅಂದರೆ ಮನುಷ್ಯನಾಗಿ ಬಂದನು ಎಂದು ಹೇಳುತ್ತಾ ಇದ್ದಾನೆ (ಯೋಹಾನ 1:14; ಫಿಲಿಪ್ಪಿ

2:7-8; ಇಬ್ರಿ 2:14,17).

*“ಮಧ್ಯಸ್ಥನು”*– ಹೊಸ ಒಡಂಬಡಿಕೆಯಲ್ಲಿ ಈ ಪದವನ್ನು ಇಲ್ಲಿ ಮತ್ತು ಇಬ್ರಿ 8:6; 9:15; 12:24 ರಲ್ಲಿ ಮಾತ್ರ ಬರೆಯಲಾಗಿದೆ, ಆದರೆ ಇದೇ ಸತ್ಯವನ್ನು ಬೇರೆಬೇರೆ ಪದಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ನೋಡಬಹುದಾಗಿದೆ. ಯೋಹಾನ 14:6,13,14; ರೋಮಾ 5:1-2; ಎಫೆ 2:18; ಇಬ್ರಿ 4:14-16; 7:25; 10:19-22; 13:15; 1 ಯೋಹಾನ 2:1 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನು ಮಾನವನು ಮತ್ತು ದೇವರು ಆಗಿರುವದರಿಂದ ಇಬ್ಬರನ್ನೂ ಆತನು ಅರ್ಥಮಾಡಿಕೊಳ್ಳುತ್ತಾನೆ ಮತ್ತು ಇಬ್ಬರ ಮೇಲೆಯೂ ತನ್ನ ಕೈಗಳನ್ನಿಡುತ್ತಾನೆ ಹಾಗೂ ಯೋಬನು ಬಯಸಿದಂತೆ ಮಧ್ಯಸ್ಥಿಕನಾಗಿರುತ್ತಾನೆ (ಯೋಬ 9:32-35). ದೇವರು ಮತ್ತು ಮಾನವನ ನಡುವೆ ಮಧ್ಯವರ್ತಿಯಾಗಿ ಯಾವನೇ ವ್ಯಕ್ತಿ, ದೇವಭಕ್ತನು, “ದೇವರು” ಅಥವಾ ದೇವಮಾನವ ಎಂದು ಕರೆಸಿಸಿಕೊಳ್ಳುವವನು ಯಾರೂ ಇಲ್ಲ. ಮತ್ತು ಯೇಸು ಕ್ರಿಸ್ತನೇ ಪರಿಪೂರ್ಣನಾದ ಮಧ್ಯಸ್ಥಿಕನಾಗಿರುವದರಿಂದ ಬೇರೆ ಯಾರ ಅವಶ್ಯಕತೆಯೂ ಇಲ್ಲ. ಒಂದುವೇಳೆ ಮಾನವರೆಲ್ಲರೂ, ಕ್ರೈಸ್ತರೆಂಬದಾಗಿ ಕರೆಯಲ್ಪಡುವವರೆಲ್ಲರೂ, ಇದನ್ನು ನಂಬುವದಾದರೆ, ಭೂಲೋಕದ ಎಂಥಾ ಬದಲಾವಣೆಯಾಗುವದೆಂದು ಯೋಚಿಸಿರಿ! **6**

**2:6** *“ವಿಮೋಚನೆಗಾಗಿ”*– ಮತ್ತಾಯ 20:28; ರೋಮಾ 3:24-25; ಗಲಾ 1:4.

*“ಎಲ್ಲರಿಗೋಸ್ಕರ”*– ಯೇಸು ಕ್ರಿಸ್ತನು ಎಲ್ಲಾ ಮಾನವರಿಗಾಗಿ ಸತ್ತನು ಮತ್ತು ಆತನು ಕೊಟ್ಟ ಕ್ರಯ ಇಡೀ ಲೋಕದ ವಿಮೋಚನೆಗಾಗಿ ಆಗಿದೆ. ಜನರು ರಕ್ಷಣೆ ಹೊಂದದೆ ನಾಶವಾದರೆ ತಪ್ಪು ಅವರದ್ದಾಗಿದೆಯೇ ಹೊರತು ಆತನದಲ್ಲ.

*“ತಕ್ಕ ಸಮಯಗಳಲ್ಲಿ”*– ಗಲಾ 4:4. **7**

**2:7** *“ನೇಮಿಸಲ್ಪಟ್ಟೆನು”*– ದೇವರು ತನ್ನನ್ನು ಈ ಕಾರ್ಯಕ್ಕಾಗಿ ಕರೆದಿದ್ದಾನೆ ಮತ್ತು ತಾನು ಸತ್ಯವನ್ನು ಕಲಿಸಿರುವದಕ್ಕಾಗಿ ಪೌಲನು ಮತ್ತೊಮ್ಮೆ ಒತ್ತಿ ಹೇಳಿದ್ದಾನೆ. ಗಲಾ 1:11-12 ರೊಂದಿಗೆ ಹೋಲಿಸಿ ನೋಡಿರಿ.

*“ಅನ್ಯಜನರಿಗೆ”*– ಗಲಾ 2:7-8. **8**

**2:8** *“ಭಕ್ತಿಪೂರ್ವಕವಾಗಿ ಕೈಗಳನ್ನೆತ್ತಿ”*– ಪ್ರಾರ್ಥನೆಯ ಸಮಯಗಳಲ್ಲಿ ಕೈಗಳನ್ನೆತ್ತುವದು ಯೆಹೂದ್ಯರಲ್ಲಿ ಮತ್ತು ಧರ್ಮಗಳವರಲ್ಲಿ ಸಾಮಾನ್ಯವಾಗಿತ್ತು. ಪ್ರಾರ್ಥನೆಯಲ್ಲಿ ಹೀಗೆ

ಮಾಡುವದು ಅತ್ಯಂತ ಪ್ರಾಮುಖ್ಯವಾದ ಸಂಗತಿ ಎಂದು ಪೌಲನು ಹೇಳಿಲ್ಲ. ಮತ್ತಾಯ 14:19; 26:39; ಲೂಕ 18:13; ಯೋಹಾನ 17:1; ಅಪೊ 1:14; ರೊಂದಿಗೆ 2:1; 20:36 ನೋಡಿರಿ.

*"ಭಕ್ತಿಪೂರ್ವಕವಾಗಿ"*– ಕೀರ್ತನೆ 26:6; ಯೆಶಾಯ 1:15; ಯಾಕೋಬ 4:8 ರೊಂದಿಗೆ ಹೋಲಿಸಿ ನೋಡಿರಿ. ದೇವರು ನಮ್ಮ ಪ್ರಾರ್ಥನೆಗೆ ಉತ್ತರಿಸಬೇಕೆಂದು ನಾವು ಬಯಸುವದಾದರೆ ನಾವು ಪಾಪದ ಕಾರ್ಯಗಳನ್ನು ಬಿಡಬೇಕಾಗಿರುವದು ಬಹಳ ಪ್ರಾಮುಖ್ಯವಾಗಿದೆ. ಭಕ್ತಿಯಿಲ್ಲದೆ ಕೈಗಳನ್ನು ಮೇಲೆತ್ತುವದು ದೇವರನ್ನು ಅವಮಾನಿಸುವದಕ್ಕೆ ಸಮಾನವಾಗಿದೆ. ಇತರರ ಮೇಲೆ "ಕೋಪವುಳ್ಳವರಾಗಿದ್ದರೆ" ಪ್ರಾರ್ಥನೆ ಮಾಡಲು ಅಡ್ಡಿಯಾಗುತ್ತದೆ. ಮತ್ತಾಯ 6:12,14,15; ಎಫೆ 4:23,31,32; ಕೊಲೊ 3:13,15 ರೊಂದಿಗೆ ಹೋಲಿಸಿ ನೋಡಿರಿ.

*"ಅನುಮಾನಾಸ್ಪದ"*– ಗ್ರೀಕ್ ಪದವು "ಕಾರಣ" ಅಥವಾ "ಎರಡು ಮನಸ್ಸಿನ ಪ್ರಶ್ನೆಗಳನ್ನು" ಸೂಚಿಸುತ್ತದೆ – ಯಾಕೋಬ 1:6-8. **9-10**

**2:9-10** ಸ್ತ್ರೀಯರು ಯಾವ ರೀತಿ ವಸ್ತ್ರಗಳನ್ನು ಧರಿಸುತ್ತಾರೆ ಎಂಬದನ್ನು ನೋಡುತ್ತಾನೆ ಮತ್ತು ಚಿಂತಿಸುತ್ತಾನೆಯೇ? ಖಂಡಿತ. ಈ ಕಾರಣದಿಂದಲೇ ಈ ವಿಷಯಗಳನ್ನು ಬರೆಯುವಂತೆ ಆತನು ಪೌಲನಿಗೆ ಪ್ರೇರಣೆಯನ್ನು ನೀಡಿದ್ದಾನೆ. ಯೆಶಾಯ 3:16-23 ರೊಂದಿಗೆ ಹೋಲಿಸಿ ನೋಡಿರಿ. ಹಾಗೆಯೇ 1 ಪೇತ್ರ 3:3-4 ನೋಡಿರಿ. ವಿಶ್ವಾಸಿಗಳಾಗಿರುವ ಸ್ತ್ರೀಯರು ಡಂಭವಿಲ್ಲದೆ ಮಾನಸ್ಥೆಯರಾಗಿ ವಸ್ತ್ರಗಳನ್ನು ಧರಿಸಿಕೊಳ್ಳಬೇಕು ಯಾಕಂದರೆ ಲೋಕದ ಸ್ತ್ರೀಯರಂತೆ ನಡೆದುಕೊಳ್ಳುವದು ಅಥವಾ ಎಲ್ಲರ ಗಮನ ಸೆಳೆಯುವದು ಅಥವಾ ಪುರುಷರನ್ನು ಆಕರ್ಷಿಸಲು ಪ್ರಯತ್ನಿಸುವದು ಅವರ ಕಾರ್ಯವಲ್ಲ.ಅವರು ಬಂಗಾರ ಅಥವಾ ದುಬಾರಿ ಆಭರಣಗಳು ಅಥವಾ ಬೆಲೆಬಾಳುವ ವಸ್ತ್ರಗಳನ್ನು ಧರಿಸಿಕೊಳ್ಳಬಾರದು ಯಾಕಂದರೆ ಅವರು ಸರಿಯಾದ ಆಹಾರ ಮತ್ತು ವಸ್ತ್ರವಿಲ್ಲದೆ ಕಷ್ಟಪಡುತ್ತಿರುವ ಬಡವರು ಹಾಗೂ ಅವಶ್ಯಕತೆಯಲ್ಲಿರುವವರು ಇರುವ ಲೋಕದಲ್ಲಿ ಜೀವಿಸುತ್ತಾ ಇದ್ದಾರೆ. ಇದಲ್ಲದೆ ಅವರ ಕರ್ತನು ಮತ್ತು ರಕ್ಷಕನು ಸಹ ಬಡವನಾಗಿದ್ದನು (ಮತ್ತಾಯ 9:20; 2 ಕೊರಿಂಥ 8:9), ಆತನು ತನ್ನ ಜನರನ್ನು ತಮ್ಮನ್ನು ನಿರಾಕರಿಸಿಕೊಂಡು ಆತನನ್ನು ಹಿಂಬಾಲಿಸಲು ಕರೆದಿದ್ದಾನೆ – ಮತ್ತಾಯ 10:38-39; ಲೂಕ 14:33. ಬಂಗಾರ, ಆಭರಣ ಮತ್ತು ಬೆಲೆಬಾಳುವ ಬಟ್ಟೆಗಳಿಗಾಗಿ ಹಣ ಖರ್ಚು ಮಾಡುವ ಬದಲು ಬಡವರಿಗೆ ಕೊಡುವದು ಅಥವಾ ಸುವಾರ್ತೆ

ಸಾರಲು ಕೊಡುವದು ಉತ್ತಮವಾದ ಕಾರ್ಯವಾಗಿದೆ. ನಂಬಿಕೆಯುಳ್ಳ ಪುರುಷರು ಹಾಗೂ ಸ್ತ್ರೀಯರು ದೀನತೆಯುಳ್ಳವರಾಗಿರಬೇಕು, ಮಾನಸ್ಥರಾಗಿರಬೇಕು ಮತ್ತು ಸಂತುಷ್ಟರಾಗಿರಬೇಕು (6:6-8), ಮತ್ತು ತಮ್ಮ ಗಂಟುಗಳನ್ನು ಭೂಲೋಕದಲ್ಲಿ ಅಲ್ಲ ಪರಲೋಕದಲ್ಲಿ ಮಾಡಿಟ್ಟುಕೊಳ್ಳಬೇಕು (ಮತ್ತಾಯ 6:19-21) ಎಂದು ಬಯಸುತ್ತಾನೆ. ವಿಶ್ವಾಸಿಗಳೆಲ್ಲರೂ ತಾವು ಒಳ್ಳೆಯ ಕಾರ್ಯಗಳ "ಆಭರಣಗಳು" ಮತ್ತು "ವಸ್ತ್ರಗಳನ್ನು" ಧರಿಸಿಕೊಳ್ಳಬೇಕು. 11

**2:11** *"ಮೌನ"*– 1 ಕೊರಿಂಥ 14:34-35.

*"ಅಧೀನತೆ"*– 1 ಕೊರಿಂಥ 11:3,7-10. 12

**2:12** *"ಉಪದೇಶ"*– ಪುರುಷರು ಉಪಸ್ಥಿತರಾಗಿರುವಾಗ ಮಾಡಬೇಕಾದ ಸಾರ್ವಜನಿಕ ಉಪದೇಶ ಎಂಬದು ಆತನ ಮಾತಿನ ಅರ್ಥವಾಗಿದೆ. ಇದು ಸ್ತ್ರೀಯ ಕೆಲಸವಲ್ಲ. ಆದರೆ ಅವರು ಯೌವನಸ್ಥರ ಸ್ತ್ರೀಯರಿಗೆ ಉಪದೇಶದ ಸೇವೆಯನ್ನು ಮಾಡಬೇಕು (ತೀತ 2:3-5). ಹೊಸ ಒಡಂಬಡಿಕೆಯಲ್ಲಿ ಒಬ್ಬ ಸ್ತ್ರೀ ದೇವರ ವಾಕ್ಯಾವನ್ನು ವಿವರಿಸಲು ಒಬ್ಬ ವ್ಯಕ್ತಿಗೆ ಖಾಸಗಿಯಾಗಿ ಸಹಾಯ ಮಾಡುವದನ್ನು ನಾವು ನೋಡುತ್ತೇವೆ (ಅಪೊ 18:26), ಆದರೆ ಅಪೊಸ್ತಲರ ಕೃತ್ಯಗಳ ಗ್ರಂಥಕರ್ತನು ಅದರ ಬಗ್ಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. 13-14

**2:13-14** ಸ್ತ್ರೀಯರು ಸಾರ್ವಜನಿಕವಾಗಿ ಯಾಕೆ ಬೋಧಿಸಬಾರದು ಅಥವಾ ಪುರುಷರ ಮೇಲೆ ಅಧಿಕಾರ ನಡೆಸಬಾರದು ಎಂಬದಕ್ಕೆ ಪೌಲನು ಎರಡು ಕಾರಣಗಳನ್ನು ಕೊಟ್ಟಿದ್ದಾನೆ. ಅವುಗಳಲ್ಲಿ ಯಾವ ಕಾರಣವೂ ಆಗಿನ ಕಾಲದ ಸಂಪ್ರದಾಯಗಳಿಗಾಗಲಿ ಅಥವಾ ರೋಮನ್ ಸಾಮ್ರಾಜ್ಯದಲ್ಲಿದ್ದ ಪುರಷರು ಏನಂದುಕೊಳ್ಳುತ್ತಾ ಇದ್ದರು ಅಥವಾ ಅಂಥ ಕಾರ್ಯಗಳಿಗೆ ಯಾವುದೆ ಸಂಬಂಧವಿಲ್ಲ. ಮೊದಲನೆಯ ಕಾರಣವೇನೆಂದರೆ ದೇವರು ಮೊದಲು ಆದಾಮನನ್ನು ಉಂಟುಮಾಡಿದನು – ಆದಿ 2:17-18,21,22. ಪುರುಷನು ಸ್ತ್ರೀಯ ಮೇಲೆ ಅಧಿಕಾರವುಳ್ಳವನಾಗಿರಬೇಕೆಂದು ದೇವರು ಬಯಸಿದನು ಎಂಬದಾಗಿ ಪೌಲನು ಹೇಳಿದ್ದಾನೆ. ಎರಡನೆಯದಾಗಿ, ಸೈತಾನನು ಹವ್ವಳನ್ನು ವಂಚಿಸಿದನೇ ಹೊರತು ಆದಾಮನನ್ನು ವಂಚಿಸಲಿಲ್ಲ – ಆದಿ 3:1-6. ಪೌಲನು ಹೇಳುತ್ತಾ ಇರುವದೇನೆಂದರೆ ದೈವಶಾಸ್ತ್ರದ ವಿಷಯಗಳಲ್ಲಿ ಪುರುಷರಿಗಿಂತ ಹೆಚ್ಚಾಗಿ ಸ್ತ್ರೀಯರು ಸುಲಭವಾಗಿ ತಪ್ಪುತ್ತಾರೆ, ಎಂಬದಾಗಿ ಅನ್ನಿಸುತ್ತದೆ. ಅವರಿಗೆ ಯಾಕೆ ಪುರುಷರ ಮೇಲೆ ಅಧಿಕಾರ ಕೊಡಬಾರದು ಅಥವಾ ಸಭೆಯಲ್ಲಿ

ಉಪದೇಶಿಸಲು ಅವಕಾಶ ಕೊಡಬಾರದು ಎಂಬದಕ್ಕೆ ಇದು ಉತ್ತಮ ಕಾರಣವೆನಿಸುತ್ತದೆ ಹಾಗೂ ಇದು ಸರಿಯಾಗಿ ಹೊಂದಿಕೆಯಾಗುತ್ತದೆ. 14

**2:14** *"ಅಪರಾಧಿ"*– ಆದಾಮನು ಅಪರಾಧಿಯಾಗಲಿಲ್ಲ ಎಂದು ಪೌಲನು ಹೇಳುತ್ತಾ ಇಲ್ಲಾ (ರೋಮಾ 5:12-14) ಬದಲಾಗಿ ಹವ್ವಳು ಮೊದಲು ಪಾಪ ಮಾಡಿದಳು ಎಂದು ಹೇಳಿದ್ದಾನಷ್ಟೆ. 15

**2:15** ಪ್ರಸವವೇದನೆ ಹವ್ವಳ ಪಾಪಕ್ಕೆ ದೊರೆತ ಶಿಕ್ಷೆ – ಆದಿ 3:16. ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಸ್ತ್ರೀಯರಿಗೆ ಇಲ್ಲಿ ಪ್ರೋತ್ಸಾಹದ ಪದವಿದೆ ಮತ್ತು ಅವರು ಯಾವ ರೀತಿ ಜೀವಿಸುತ್ತಾರೆ ಎಂಬದೇ ಅವರ ನಂಬಿಕೆಗೆ ಪುರಾವೆಯಾಗಿದೆ.

# 3 1-7

**3:1-7 –** "ಸಭಾಧ್ಯಕ್ಷನು" ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದವನ್ನು ಹೊಸ ಒಡಂಬಡಿಕೆಯಲ್ಲಿ ಕೇವಲ ಐದು ಸಲ ಮಾತ್ರವೇ ಉಪಯೋಗಿಸಲಾಗಿದೆ – ಅಪೊ 20:28; ಫಿಲಿಪ್ಪಿ 1:1; 1 ತಿಮೊ 3:2; ತೀತ 1:7; 1 ಪೇತ್ರ 2:25. ಇದು ನಿಜವಾಗಿಯೂ "ನಿಮ್ಮ ಮೇಲೆ ಮೇಲ್ವಿಚಾರಣೆ ಮಾಡುವವನು" ಎಂಬ ಅರ್ಥವನ್ನು ಕೊಡುವ ಎರಡು ಪದವಾಗಿದೆ. ಸ್ಥಳೀಯ ಸಭೆಯ ಹಿರಿಯರನ್ನು ಸೂಚಿಸಲು ಈ ಪದವನ್ನು ಉಪಯೋಗಿಸಲಾಗಿದೆ (ಅಪೊ 20:17; ರೊಂದಿಗೆ 20:28; ಫಿಲಿಪ್ಪಿ 1:1 ಹೋಲಿಸಿ ನೋಡಿರಿ). ಸಭಾಧ್ಯಕ್ಷನ ಕೆಲಸವು "ಒಳ್ಳೆಯ" ಕೆಲಸವಾಗಿದೆ, ಭೂಲೋಕದಲ್ಲಿಯೇ ಒಳ್ಳೆಯದಾಗಿದೆ ಮತ್ತು ಅದನ್ನು ಚೆನ್ನಾಗಿ ಮಾಡುವವರಿಗೆ ದೊಡ್ಡ ಪ್ರತಿಫಲಗಳು ಸಿಗುತ್ತವೆ – 1 ಪೇತ್ರ 5:1-4. ಸಭಾಧ್ಯಕ್ಷನು ಅಥವಾ ಹಿರಿಯನ ಜವಾಬ್ದಾರಿಕೆಯು ಪ್ರಾಮುಖ್ಯವಾಗಿರುವದರಿಂದ ಅರ್ಹತೆಗಳು ದೊಡ್ಡದಾಗಿವೆ. ಒಂದುವೇಳೆ ಸಭೆಗಳು ಈ ಅರ್ಹತೆಗಳನ್ನು ಕಡೆಗಣಿಸಿದರೆ ಮತ್ತು ತಮ್ಮ ಅಭಿಪ್ರಾಯಗಳಿಗನುಸಾರ ಸಭಾಧ್ಯಕ್ಷನನ್ನು ಆರಿಸಿಕೊಂಡರೆ ಸಭೆಯ ಜೀವಿತದ ಅತ್ಯಂತ ಪ್ರಾಮುಖ್ಯವಾದ ಕ್ಷೇತ್ರದಲ್ಲಿ ಅವರು ವಿಫಲರಾಗುವರು ಮತ್ತು ತಮ್ಮ ಮೇಲೆ ತಾವೇ ತೊಂದರೆಗಳನ್ನು ಬರಮಾಡಿಕೊಳ್ಳುವರು. 2

**3:2** *"ದೋಷಾರೋಪಣೆಯಿಲ್ಲದವನು"*– ಸಭಾಧ್ಯಕ್ಷನಾಗಿ ಸಭೆ ಯಾರನ್ನೇ ಆಯ್ಕೆ ಮಾಡಿದರೂ ಆತನು ಯಾರೂ ಅವನ ಮೇಲೆ ನ್ಯಾಯಬದ್ಧವಾಗಿ ಆರೋಪ ಮಾಡಲು ಆಗದ ಹಾಗೆ ಪರಿಶುದ್ಧನಾಗಿ, ಪ್ರಾಮಾಣಿಕನಾಗಿ ಮತ್ತು ನೈತಿಕತೆಯುಳ್ಳವನಾಗಿ ಜೀವಿಸಬೇಕು.

*"ಏಕಪತ್ನಿಯುಳ್ಳವನು"*– ಆ ಸಮಯದಲ್ಲಿ ಬಹುಪತ್ನಿತ್ವವು ಸಾಮಾನ್ಯವಾಗಿತ್ತು. ಒಬ್ಬಳಿಗಿಂತ ಹೆಚ್ಚು ಹೆಂಡತಿಯರನ್ನು ಹೊಂದಿದ್ದ ಪುರುಷರಲ್ಲಿ ಕೆಲವರು ಕ್ರೈಸ್ತರಾದರು. ಅಂಥ ವ್ಯಕ್ತಿ ಸಭಾಧ್ಯಕ್ಷನಾಗಬಾರದು. ದೇವರು ತನ್ನ ಜನ ಏನಾಗಿರಬೇಕೆಂದು ಬಯಸುತ್ತಾನೋ (1 ಪೇತ್ರ 5:3) ಅದಕ್ಕೆ ಸಭಾಧ್ಯಕ್ಷನು ಇಡೀ ಸಭೆಗೆ ಮಾದರಿಯಾಗಿರಬೇಕು. ಮತ್ತು ಪ್ರಾರಂಭದಿಂದಲೇ ಪುರುಷನು ಏಕಪತ್ನಿಯುಳ್ಳವನಾಗಿರಬೇಕು ಎಂಬದು ಮಾನವರ ವಿಷಯದಲ್ಲಿ ದೇವರ ಯೋಜನೆಯಾಗಿದೆ – ಆದಿ 3:22-24; ಮತ್ತಾಯ 19:3-9. "ಏಕಪತ್ನಿಯುಳ್ಳವನು" ಎಂದರೆ ಸಭಾಧಕ್ಷನು ಯಾವುದೇ ಪರಿಸ್ಥಿತಿಯಲ್ಲಿಯೂ ಎರಡನೇ ಮದುವೆ ಮಾಡಿಕೊಂಡಿರಬಾರದು ಎಂಬದು ಕೆಲವರ ಯೋಚನೆಯಾಗಿದೆ. ಬ್ರಹ್ಮಚಾರಿಗಳು ಸಭೆಗಳಲ್ಲಿ ಅಧ್ಯಕ್ಷರಾಗಬಾರದು ಎಂದು ಪೌಲನು ಕಲಿಸುತ್ತಿದ್ದಾನೆ ಎಂಬದು ಇನ್ನೂ ಕೆಲವರ ಯೋಚನೆಯಾಗಿದೆ. ಏನೇಆದರೂ, ಅವನೇ ಒಂಟಿಯಾಗಿದ್ದನು (1 ಕೊರಿಂಥ 7:8) ಆದರೂ ಸಭಾಧ್ಯಕ್ಷನ ಜವಾಬ್ದಾರಿಕೆಗಿಂತ ಹೆಚ್ಚಿನ ಜವಾಬ್ದಾರಿಕೆಯವನಾಗಿದ್ದನು ಅಂದರೆ ಅನೇಕ ಸಭೆಗಳ ಮೇಲೆ ಅವನು ಮೇಲ್ವಿಚಾರಣೆ ಮಾಡಬೇಕಾಗಿತ್ತು (1 ಕೊರಿಂಥ 12:28; 2 ಕೊರಿಂಥ 11:28). 1 ಕೊರಿಂಥ 7:1,8,26,27,32-34 ವಾಕ್ಯಗಳನ್ನು ಬರೆದ ವ್ಯಕ್ತಿ ಮದುವೆಯಾಗಿರದ ವ್ಯಕ್ತಿಗಳು ಸಭೆಯಲ್ಲಿ ಅಧ್ಯಕ್ಷರಾಗಬಾರದು ಎಂದು ಹೇಳಿದ್ದಾನೆ ನಾವು ಯೋಚಿಸಲು ಸಾಧ್ಯವೇ? 4ನೇ ವಾಕ್ಯದ ನೋಟ್ಸ್ ಸಹ ನೋಡಿರಿ.

*"ಸಂಯಮವುಳ್ಳವನು"*– ಕರುಣೆ ತೋರದವನಾಗಿರುವದಿಲ್ಲ.

*"ಜಿತೇಂದ್ರಿಯನು"*– 1 ಕೊರಿಂಥ 9:27; 2 ತಿಮೊ 1:7.

*"ಮಾನಸ್ಥನು"*– ದೇವರ ವಾಕ್ಯ ಗೊತ್ತಿದ್ದರೆ ಅಥವಾ ಬೋಧಿಸಿದರೆ ಸಾಲದು, ದೇವರ ವಾಕ್ಯ ಹೇಳುವ ಪ್ರಕಾರವೂ ನಾವೂ ಜೀವಿಸಬೇಕು.

*"ಅತಿಥಿಸತ್ಕಾರ ಮಾಡುವವನು"*– ಅವನು ಜನರನ್ನು ತನ್ನ ಮನೆಗೆ ಆಹ್ವಾನಿಸಬೇಕು ಮತ್ತು ಅವರಿಗೆ ದಯೆಯನ್ನು ತೋರಿಸಬೇಕು – ಇಬ್ರಿ 13:2 ನೋಡಿರಿ. ತೀತನ ಪತ್ರಿಕೆಯಲ್ಲಿ ಇದನ್ನು ಮತ್ತಷ್ಟು ಉತ್ತಮವಾಗಿ ಹೇಳಲಾಗಿದೆ – "ಅತಿಥಿ ಸತ್ಕಾರ ಪ್ರೀತಿಸುವವನು" – ಅಂದರೆ, ಅತಿಥಿ ಸತ್ಕಾರ ಮಾಡುವದನ್ನು ಪ್ರೀತಿಸುವವನೇ ಹೊರತು ಹೊಂದುವವನಲ್ಲ. ತನ್ನ ಸಹಾಯದ ಅವಶ್ಯಕತೆಯಲ್ಲಿರುವವರಿಂದ ಅವನು ಸ್ವಾರ್ಥದಿಂದ ಹಿಂಜರಿಯಬಾರದು.

*"ಬೋಧಿಸುವದರಲ್ಲಿ ಪ್ರವೀಣನಾಗಿರಬೇಕು"*– ದೇವರ ವಾಕ್ಯಗಳನ್ನು ಕಲಿಸಬೇಕು. ಇದರ

ಅರ್ಥ ಸಭಾಧ್ಯಕ್ಷರಿಗೆ ದೇವರ ವಾಕ್ಯ ಗೊತ್ತಿರಬೇಕು – ಅವರಿಗೇ ಗೊತ್ತಿಲ್ಲವೆಂದರೆ ಬೇರೆಯವರಿಗೆ ಕಲಿಸಲು ಹೇಗೆ ಸಾಧ್ಯ? ಇದಲ್ಲದೆ ಬೋಧಿಸಲು ಅವರು ದೇವರಿಂದ ತಲಾಂತು ಹೊಂದಿರಬೇಕು. 3

**3:3** *"ಮದ್ಯಾಸಕ್ತನಾಗಿರಬಾರದು"*– ಮದ್ಯದ ಚಟಕ್ಕೆ ಒಳಗಾಗಿರಬಾರದು. ರೋಮಾ 14:21; ಮತ್ತು ಎಫೆ 5:18 ನಮ್ಮ ಅನುಸರಣೆಗೆ ಉತ್ತಮವಾದ ಸೂಚನೆಗಳನ್ನು ಕೊಟ್ಟಿವೆ. ಪ್ರತಿಯೊಬ್ಬ ವಿಶ್ವಾಸಿಯು ಕರ್ತನಲ್ಲಿ ಆಸಕ್ತನಾಗಿರಬೇಕೇ ಹೊರತು ಮದ್ಯಾಸಕ್ತಿಯಿಲ್ಲದವನಾಗಿರಬೇಕು.

*"ಜಗಳವಾಡುವವನಾಗಿರಬಾರದು"*– ದೇವಸೇವಕರು ಇತರರನ್ನು ಯಾವುದೇ ರೀತಿಯಲ್ಲಿಯೂ ದೂಷಿಸುವವರಾಗಿರಬಾರದು. ಇದಲ್ಲದೆ, ಅವನು ಬೇರೆಯವರಿಗೆ ತೊಂದರೆ ಕೊಡಲು ಯಾರನ್ನೂ ಕರೆತರಬಾರದು. ಅಂಥ ಕಾರ್ಯ ಮಾಡುವ ವ್ಯಕ್ತಿ "ಕ್ರೈಸ್ತನು" ಎಂಬ ಹೆಸರಿಗೆ ಅರ್ಹನಾಗಿರುವದಿಲ್ಲ ಮತ್ತು ಸಭೆಯ ನಾಯಕತ್ವದಲ್ಲಿ ಅವನಿಗೆ ಯಾವುದೇ ಸ್ಥಾನವಿರುವದಿಲ್ಲ.

*"ದ್ರವ್ಯಾಶೆಯಿಲ್ಲದವನಾಗಿರಬೇಕು"*– ಹಣ ಅಥವಾ ಆಸ್ತಿಯನ್ನು ಅಕ್ರಮ ಮತ್ತು ಅಪ್ರಾಮಾಣಿಕವಾದ ಸಂಪಾದಿಸುವದಾದರೆ ಅಂಥವನು ಸಭೆಯ ನಾಯಕನಾಗಿರಲು ಅನರ್ಹನಾಗಿರುತ್ತಾನೆ. ಅಷ್ಟುಮಾತ್ರವಲ್ಲ, ಅಂಥಕಾರ್ಯಗಳನ್ನು ಬಯಸುವದಾದರೆ ಅವನ ಸಂಪೂರ್ಣವಾಗಿ ನಾಶವಾಗುತ್ತಾನೆ – 6:5; ಯೋಹಾನ 12:6. ಪ್ರತಿಯೊಬ್ಬ ಕ್ರೈಸ್ತನು ಅಂಥ ದುರಾಸೆಗೆ ಒಳಗಾಗಬಾರದು ಮತ್ತು ಅದನ್ನು ವಿಷದಂತೆ ದೂರವಿಡಬೇಕು.

*"ಸಾತ್ವಿಕನು, ಕುತರ್ಕ ಮಾಡದವನೂ ಆಗಿರಬೇಕು"*– 2 ತಿಮೊ 2:24-25; ಮತ್ತಾಯ 11:29.

*"ಹಣದಾಸೆಯಿಲ್ಲದವನಾಗಿರಬೇಕು"*– 6:6-10; ಮತ್ತಾಯ 6:24; ಲೂಕ 16:13-14. ಒಂದುವೇಳೆ ಈ ಕಾರ್ಯವನ್ನು ಅಭ್ಯಾಸ ಮಾಡುವದಾದರೆ ಈಗಿನ ಸಭೆಯ ನಾಯಕರಲ್ಲಿ ಎಷ್ಟು ಜನ ದೂರ ಇರುವರು? 4

**3:4** *"ಮಕ್ಕಳನ್ನು ಅಧೀನದಲ್ಲಿಟ್ಟುಕೊಂಡು ಸ್ವಂತ ಮನೆಯವರನ್ನು ಚೆನ್ನಾಗಿ ಆಳುವವನಾಗಿರಬೇಕು"*– ಹಾಗೆಯೇ ತೀತ 1:6 ನೋಡಿರಿ. ಒಂದುವೇಳೆ ಒಬ್ಬ ಪುರುಷನು ತನ್ನ ಮನೆಯಲ್ಲಿ ನ್ಯಾಯಬದ್ಧವಾದ ಹಕ್ಕನ್ನು ನಡೆಸಲು ಆಗದೆ ಹೋದರೆ, ಸಭೆಯನ್ನು

ನಡೆಸಲು ಬೇಕಾದ ಸಾಮರ್ಥ್ಯ ತನಗಿಲ್ಲ ಎಂಬದನ್ನು ತಾನೇ ಸಾಬೀತುಪಡಿಸುವವನಾಗಿದ್ದಾನೆ. ಒಬ್ಬ ವ್ಯಕ್ತಿ ಸಭಾಧ್ಯಕ್ಷನಾಗಲು ಅರ್ಹನಾಗಿದ್ದಾನೆಯೇ ಎಂಬದನ್ನು ತಿಳಿಯಲು ಇದು ಯುಕ್ತವಾದ ಪರೀಕ್ಷೆಯಾಗಿದೆ. ಮಕ್ಕಳ ಬಗ್ಗೆ ಬರೆಯಲಾಗಿರುವದು, ಒಬ್ಬನು ಮದುವೆಯಾದವನಾಗಿದ್ದರೂ ಮಕ್ಕಳಿಲ್ಲದಿದ್ದರೆ ಅವನು ಸಭಾಧ್ಯಕ್ಷನಾಗಬಾರದು ಎಂಬದನ್ನು ಸೂಚಿಸುತ್ತದೆಯೇ? ಆದರೆ ಹಾಗೆ ಸೂಚಿಸುವದಿಲ್ಲ. ಪೌಲನು ಹೇಳುವದೇನೆಂದರೆ, ಒಂದುವೇಳೆ ಅವನಿಗೆ ಮಕ್ಕಳಿದ್ದರೆ ಅವನನ್ನು ಅಧೀನದಲ್ಲಿಟ್ಟುಕೊಳ್ಳಲು ಅವನು ಶಕ್ತನಾಗಿರಬೇಕು. 2 ನೇ ವಚನದಲ್ಲಿ ಹೇಳಲಾಗಿರುವ "ಏಕಪತ್ನಿಯುಳ್ಳವನಾಗಿರಬೇಕು" –ಎಂಬದರೊಂದಿಗೆ ಹೋಲಿಸಿ ನೋಡಿರಿ. ಸಭಾಧ್ಯಕ್ಷನಿಗೆ ಮಕ್ಕಳು ಇರಬೇಕು ಎಂದು ಪೌಲನು ಹೇಳುತ್ತಾ ಇಲ್ಲವೆಂದರೆ ಅವನು ಮದುವೆಯಾಗಿರಬೇಕು ಎಂಬದಾಗಿಯೂ ಅವನು ಹೇಳುತ್ತಾ ಇಲ್ಲ. ಎರಡೂ ಹೇಳಿಕೆಗಳು ಒಂದೇ ಗುಂಪಿನಲ್ಲಿವೆ. 6

**3:6** *"ಹೊಸದಾಗಿ ಸಭೆಯಲ್ಲಿ ಸೇರಿದವನಾಗಿರಬಾರದು"*– ಯಾಕೆ ಎಂಬ ಕಾರಣವನ್ನು ಪೌಲನು ಕೂಡಲೇ ತಿಳಿಸಿದ್ದಾನೆ. ಅನುಭವ ಇಲ್ಲದವರನ್ನು ಸಭಾಧ್ಯಕ್ಷಕರನ್ನಾಗಿ ನೇಮಿಸುವದಕ್ಕಿಂತಲೂ ಸಭಾಧ್ಯಕ್ಷರೇ ಇಲ್ಲದಿರುವದು ಉತ್ತಮವಾಗಿದೆ. ಅಧಿಕಾರದ ಸ್ಥಾನಗಳಲ್ಲಿ ನೇಮಕಗೊಳ್ಳುವ ಮೊದಲು ವಿಶ್ವಾಸಿಗಳು ಆತ್ಮೀಕವಾಗಿ ಬೆಳೆಯಬೇಕು ಮತ್ತು ದೇವರ ಸತ್ಯಗಳಲ್ಲಿ ಸ್ಥಾಪನೆಯಾಗಬೇಕು. ಇಲ್ಲವಾದರೆ ಇತರರಿಗೆ ಕಲಿಸಲು ಅಥವಾ ಸಭೆಯನ್ನು ಮುನ್ನಡೆಸಲು ಅವರಿಂದ ಸಾಧ್ಯವಾಗುವದಿಲ್ಲ. ಇದಲ್ಲದೆ ಆತ್ಮೀಕವಾಗಿ ಇನ್ನೂ ಪರಿಪಕ್ವತೆಯಿಲ್ಲದವರಿಗೆ ನಾಯಕತ್ವದ ಸ್ಥಾನಗಳನ್ನು ಕೊಟ್ಟರೆ ಅವರು ಅಹಂಕಾರಗಳಿಗೆ ಒಳಗಾಗುವ ಸಾಧ್ಯತೆಗಳೂ ಇರುತ್ತವೆ.

*"ಸೈತಾನನಿಗೆ ಪ್ರಾಪ್ತವಾದ ಶಿಕ್ಷಾವಿಧಿ"*– ಅಥವಾ "ಸೈತಾನನಿಗಾಗುವ ನ್ಯಾಯತೀರ್ಪು" – ಇದರ ಅರ್ಥ ಹೀಗಿರಬಹುದು: ಸೈತಾನನು ಸತತವಾಗಿ ದೇವರ ಮುಂದೆ ವಿಶ್ವಾಸಿಗಳನ್ನು ದೂಷಿಸುವವನಾಗಿದ್ದಾನೆ (ಪ್ರಕ 12:10). ಒಂದುವೇಳೆ ಸಭೆಯ ನಾಯಕನಲ್ಲಿ ಅವನಿಗೇನಾದರೂ ಗರ್ವ ಮತ್ತು ವಂಚನೆ ಕಂಡುಬಂದರೆ, ದೇವರ ಮುಂದೆ ಆರೋಪ ಮಾಡಲು ಅವನಿಗೆ ಅವಕಾಶ ದೊರೆಯುತ್ತದೆ. ಮತ್ತಾಯ 4:1 ರಲ್ಲಿ "ಸೈತಾನನ" ಕುರಿತಾದ ನೋಟ್ ನೋಡಿರಿ. 7

**3:7** *"ಹೊರಗಣವರಿಂದ ಒಳ್ಳೆಯವನೆನಿಸಿಕೊಂಡಿರಬೇಕು"*– ಕೊಲೊ 4:5; 1 ಥೆಸ 4:12; 1 ಕೊರಿಂಥ 10:32; 1 ಪೇತ್ರ 2:12; ಮತ್ತಾಯ 5:16. ಇದು ಬಹಳ ಪ್ರಾಮುಖ್ಯವಾದ

ಸಂಗತಿಯಾಗಿದೆ. ಇದರ ಅರ್ಥ ಅವನ ಜೀವಿತ (ಮತ್ತು ಅವನ ಮಾತುಗಳು ಮಾತ್ರವಲ್ಲ) ಅವಿಶ್ವಾಸಿಗಳ ನಡುವೆ ಸಾಕ್ಷಿಯುಳ್ಳವನಾಗಿರಬೇಕು; ಅವನು ಒಳ್ಳೆಯವನೆನಿಸಿಕೊಂಡಿರಬೇಕು. ಹೊರಗಿನವರ ದೃಷ್ಟಿಯಲ್ಲಿ ಕೆಟ್ಟವನು ಅಥವಾ ದುಷ್ಟನಾಗಿರುವವನನ್ನು ಒಂದುವೇಳೆ ಸಭೆ ಸಭಾಧ್ಯಕ್ಷನನ್ನಾಗಿ ಆಯ್ಕೆ ಮಾಡಿದರೆ, ಅವರು ಅವನನ್ನು ದೂಷಿಸುವರು ಮತ್ತು ಅವನನ್ನು ಹಾಗೂ ಇಡೀ ಸಭೆಯನ್ನು ಅವಮಾನಿಸುವರು. ಇದಲ್ಲದೆ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವವರು ಮತ್ತು ಸಭೆಗೆ ಸೇರುವವರೆಲ್ಲರಿಗೆ ಅಡಚಣೆಯಾಗಿರುವದು.

*"ಸೈತಾನನ ಉರುಲು"*– ಲೂಕ 22:31,33; ಕೀರ್ತನೆ 91:3; 124:7; 2 ತಿಮೊ 2:26. ತೀತ 1:6-9 ರಲ್ಲಿ ಪೌಲನು ಮತ್ತೊಮ್ಮೆ ಹಿರಿಯನಿಗೆ ಇರಬೇಕಾದ ಗುಣಲಕ್ಷಣಗಳ ಪಟ್ಟಿಯನ್ನು ತಿಳಿಸಿದ್ದಾನೆ, ಅವುಗಳಲ್ಲಿ ಕೆಲವು 1 ತಿಮೊಥೆಯಲ್ಲಿ ಬರೆಯಲಾಗಿರುವ ವಿಷಯಗಳೇ ಆಗಿವೆ, ಇದಲ್ಲದೆ ಅದೇ ಪದಗಳೇ ಇರುವದೂ ವಿಶೇಷವಾಗಿದೆ. ಅವುಗಳೊಂದಿಗೆ ಅವನು ಬೇರೆ ಕೆಲವು ಗುಣಗಳನ್ನೂ ಸೇರಿಸಿದ್ದಾನೆ – ಹಿರಿಯರ ಮಕ್ಕಳು "ನಂಬಿಗಸ್ತರಾಗಿರಬೇಕೇ ಹೊರತು ಅವರ ಮೇಲೆ ಯಾವುದೇ ರೀತಿಯ ದೋಷಾರೋಪಗಳು ಇರಬಾರದು"; ಅವನು "ಬೇಗ ಕೋಪಿಸಿಕೊಳ್ಳುವವನಾಗಿರಬಾರದು"; "ಅವನು ಒಳ್ಳೆಯದನ್ನು ಪ್ರೀತಿಸುವವನಾಗಿರಬೇಕು"; ಮತ್ತು ಅವನು "ನೀತಿವಂತನು" ಹಾಗೂ "ಪರಿಶುದ್ಧನಾಗಿರಬೇಕು"; ಮತ್ತು "ನಂಬಿಗಸ್ತವಾಗಿರುವ ದೇವರ ವಾಕ್ಯಗಳಿಗೆ" ಬದ್ಧನಾಗಿ ನಡೆದುಕೊಳ್ಳುವವನಾಗಿರಬೇಕು. **8**

**3:8** *"ಸಭಾಸೇವಕರು"*– "ಸೇವೆ ಮಾಡುವದು" ಎಂಬ ಅರ್ಥವಿರುವ ಗ್ರೀಕ್ ಪದದಿಂದ ಈ ಪದ ಬಂದದ್ದಾಗಿದೆ. ಆದಿ ಸಭೆಯಲ್ಲಿ ಇಬ್ಬರೂ ಇದ್ದರು ಹಿರಿಯರು ("ಮೇಲ್ವಿಚಾರಕರು" ಅಥವಾ "ಸಭಾಧ್ಯಕ್ಷರು") ಮತ್ತು ಸಭಾಸೇವಕರು – ಫಿಲಿಪ್ಪಿ 1:1. ಹಿರಿಯರಿಗೆ ಸಭೆಯ ಹೊರನೋಟ ಮತ್ತು ಆತ್ಮೀಕ ಪೋಷಣೆಯ ಕಾರ್ಯವಿತ್ತು, ಹಾಗೂ ದೇವರ ವಾಕ್ಯಗಳನ್ನು ಬೋಧಿಸಲು ಶಕ್ತರಾಗಿರಬೇಕು (ವ 2), ಸಭಾಸೇವಕರು ಇತರೆ ರೀತಿಯ ಸೇವೆಗಳನ್ನೂ ಮಾಡುತ್ತಾ ಇದ್ದರು. ಅಪೊ 6:1-6 ರೊಂದಿಗೆ ಹೋಲಿಸಿ ನೋಡಿರಿ.

*"ಗೌರವವುಳ್ಳವನಾಗಿರಬೇಕು"*– ಒಂದುವೇಳೆ ಪುರುಷರು ಗೌರವವುಳ್ಳವರಾಗಿರದೆ ಹೋದರೆ ಸಭೆಯಲ್ಲಿ ಯಾವುದೇ ಸ್ಥಾನಕ್ಕೂ ಅವರು ಅರ್ಹರಾಗಿರುವದಿಲ್ಲ.

*"ನೀಚಲಾಭವನ್ನು ಅಪೇಕ್ಷಿಸುವವನಾಗಿರಬಾರದು"*– ಈ ವಿಷಯದಲ್ಲಿ ಸಭೆಯಲ್ಲಿರುವ

ಅತ್ಯಂತ ಕಡೆಯ ಸೇವಕನು ಸಹ ಸಭಾಧ್ಯಕ್ಷನಾಗಿ ಈ ತತ್ವವನ್ನು ಸ್ಪಷ್ಟವಾಗಿ ಪಾಲಿಸುವವನಾಗಿರಬೇಕು – ವ 3. ವಕ್ರಬುದ್ಧಿಯುಳ್ಳವರು ಸಭೆಯ ಯಾವುದೇ ಸ್ಥಾನದಲ್ಲಿದ್ದರೂ (ಅಥವಾ ಯಾವುದೇ ಸಂಸ್ಥೆಯಲ್ಲಿದ್ದರೂ) ನಾಶನದ ಕಾರ್ಯಗಳಿಗೆ ಕೈಹಾಕುತ್ತಾರೆ ಮತ್ತು ತನ್ನ ಸದಸ್ಯರಿಗೆ ಬೌತಿಕ ಹಾಗೂ ಆತ್ಮೀಕ ವಿಷಯಗಳನ್ನು ನಷ್ಟಗಳಾಗುವಂತೆ ಮಾಡುತ್ತಾರೆ. ಮತ್ತು ದುಃಖದ ವಿಷಯವೇನೆಂದರೆ, ಸಭೆಗಳು ಮತ್ತು ಸಂಸ್ಥೆಗಳಲ್ಲಿ ನಾಯಕತ್ವಕ್ಕಿರಬೇಕಾದ ಈ ಗುಣವನ್ನು ನಿರ್ಲಕ್ಷಿಸಲಾಗುತ್ತದೆ. **9**

**3:9** *"ಸತ್ಯಾರ್ಥವನ್ನು ಶುದ್ಧಮನಸ್ಸಾಕ್ಷಿಯಿಂದ ಕೈಗೊಳ್ಳುವವನಾಗಿರಬೇಕು"*– 1:5,19.

*"ಸತ್ಯಾರ್ಥ"*– ಎಂದರೆ ಏನನ್ನು ನಂಬಬೇಕೆಂದು ದೇವರು ಕೊಟ್ಟಿರುವ ಪ್ರಕಟನೆ. ಸಭಾಸೇವಕರು ಮತ್ತು ಸಭೆಯ ಇತರೆ ನಾಯಕರು (ಮತ್ತು ಪ್ರತಿಯೊಬ್ಬ ಸದಸ್ಯನು) ಯಥಾರ್ಥವಾಗಿ ಈ ಸತ್ಯಾರ್ಥಗಳನ್ನು ನಂಬಬೇಕೇ ಹೊರತು ಕೇವಲ ಬಾಯಮಾತಿನಲ್ಲಿ ಮಾತ್ರವೇ ಹೇಳುವವರಾಗಿರಬಾರದು. **10**

**3:10** *"ಪರೀಕ್ಷಿಸಲ್ಪಡಬೇಕು"*– ಯಾವುದೇ ವ್ಯಕ್ತಿಗೆ ಸಭೆಯಲ್ಲಿ ಜವಾಬ್ದಾರಿಕೆಯನ್ನು ಕೊಡುವ ಮೊದಲು, ಆ ವ್ಯಕ್ತಿಯನ್ನು ನೇಮಿಸುವ ಬಗ್ಗೆ ಆಲೋಚಿಸುವವರು, ಅವನಲ್ಲಿ ಆ ಸ್ಥಾನಕ್ಕೆ ಬೇಕಾದ ಗುಣಲಕ್ಷಣಗಳಿವೆ ಎಂಬದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಒಂದುವೇಳೆ ಅವರು ಅಯೋಗ್ಯನಾಗಿರುವವನನ್ನು ನೇಮಕಮಾಡಿದರೆ ಅಥವಾ ದೇವರು ಈ ಅಧ್ಯಾಯದಲ್ಲಿ ತಿಳಿಸಿರುವ ಕಾರಣಗಳನ್ನು ಹೊರತುಪಡಿಸಿ ಬೇರೆ ಕಾರಣಗಳಿಂದ ಅವರು ಯಾರನ್ನಾದರೂ ನೇಮಕ ಮಾಡಿದರೆ ಸಭೆ ತೊಂದರೆಗೆ ಒಳಗಾಗುತ್ತದೆ. **11**

**3:11** ಸಭಾಸೇವಕರ ಹೆಂಡತಿಯರು ಅಥವಾ ಯಾವುದೇ ರೀತಿಯಲ್ಲಿ ಸಭಾಸೇವೆ ಮಾಡುವ ಸ್ತ್ರೀಯರು (ರೋಮಾ 16:1) ಜನರ ನಡುವೆ ಒಳ್ಳೆಯ ಸಾಕ್ಷಿಯನ್ನು ಹೊಂದಿರಬೇಕು. **12**

**3:12** ವಚನ 2,4. **13**

**3:13** ನಂಬಿಗಸ್ಥಿಕೆಯಿಂದ ಯೇಸು ಕ್ರಿಸ್ತನ ಸೇವೆ ಮಾಡುವವರು, ಆತನ ಸೇವೆ ಮಾಡಲು ಅವಶ್ಯವಾದ ಶಕ್ತಿಯನ್ನು ಹೊಂದಿಕೊಳ್ಳುವವರು ಮತ್ತು ಆತನ ಕಾರ್ಯಕ್ಕೆ ಪ್ರತಿಷ್ಠಿತರಾಗಿರುವವರು ಬಲವಾದ ಹಾಗೂ ದೃಢವಾದ ನಂಬಿಕೆಯನ್ನು ಹೊಂದುವರು. ಇಬ್ರಿ 6:10-11 ರೊಂದಿಗೆ ಹೋಲಿಸಿ ನೋಡಿರಿ. **15**

**3:15** *"ದೇವರ ಮನೆ"*– ಅಂದರೆ ಬಹುಶಃ "ದೇವರ ಮನೆಯವರು" – ಎಫೆ 2:19; ಇಬ್ರಿ 3:6. ಯೇಸು ಕ್ರಿಸ್ತನು ಸ್ಥಾಪಿಸಿರುವ ಸಭೆ ಮತ್ತು ಆತನು ಪೋಷಿಸುವದು ದೇವರ

ಕುಟುಂಬವಾಗಿದೆ. ಎಫೆ 3:14-15; ಮತ್ತಾಯ 12:46-50; ಇಬ್ರಿ 2:11 ರೊಂದಿಗೆ ಹೋಲಿಸಿ ನೋಡಿರಿ. ಎಲ್ಲಾ ಕುಟುಂಬಗಳಲ್ಲಿ ಸತ್ಯವಾಗಿರುವ ಹಾಗೆಯೇ ದೇವರ ಕುಟುಂಬದಲ್ಲಿರುವವರೂ ಹೇಗೆ ನಡೆದುಕೊಳ್ಳಬೇಕು ಎಂಬದನ್ನು ಕಲಿತುಕೊಳ್ಳಬೇಕು.

*"ಸತ್ಯದ ಸ್ತಂಭ ಮತ್ತು ಆಧಾರ"*– ಪೌಲನು ಇಲ್ಲಿ ಯಾವುದೋ ಸ್ಥಳೀಯ ಸಭೆ ಅಥವಾ ಬೇರೆಯವರ ಬಗ್ಗೆ ಮಾತನಾಡುತ್ತಾ ಇಲ್ಲ. ಅವುಗಳಲ್ಲಿ ಕೆಲವು ದುರಾದೃಷ್ಟವಶಾತ್, ಸತ್ಯದ ಸ್ತಂಭಗಳು ಮತ್ತು ಆಧಾರಗಳಾಗಿಲ್ಲ ಬದಲಾಗಿ ಸುಳ್ಳು ಬೋಧನೆಗಳಾಗಿವೆ. ಪೌಲನು ಯಾವುದೇ ಸಂಸ್ಥೆಯ ಸಭೆಯ ಬಗ್ಗೆಯೂ ಮಾತನಾಡುತ್ತಾ ಇಲ್ಲ. ಪೌಲನ ಮಾತಿನ ಅರ್ಥ ಸಭೆ ಎಂದರೆ ಯೇಸು ಕ್ರಿಸ್ತನ ದೇಹ, ದೇವರ ಆಲಯ. ಯೇಸು ಕ್ರಿಸ್ತನೇ ಈ ಸಭೆಯ ಶಿರಸ್ಸು, ಅದರ ಅಡಿಪಾಯ ಮತ್ತು ಅದರ ಮೂಲೆಗಲ್ಲಾಗಿದ್ದಾನೆ (ಎಫೆ 1:22-23; 2:20-22; 1 ಕೊರಿಂಥ 3:11; ಕೊಲೊ 1:18). ಇದು ಯೇಸು ಕ್ರಿಸ್ತನು ತನಗಾಗಿ ನಿರ್ಮಿಸಿಕೊಳ್ಳುತ್ತಾ ಇರುವ ಸಭೆಯಾಗಿದೆ (ಮತ್ತಾಯ 16:18). ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ದೇವರಾತ್ಮನ ಮೂಲಕ ಹೊಸದಾಗಿ ಹುಟ್ಟುವವರು ಮಾತ್ರವೇ ಈ ಸಭೆಯ ಸದಸ್ಯರಾಗಿರುವರು (ಯೋಹಾನ 1:12-13; 3:3-8; 1 ಕೊರಿಂಥ 12:12-13). ದೇವರ ಸ್ಥಿರವಾದ ಅಡಿಪಾಯದ ಮೇಲೆ ಈ ಸಭೆಯೊಂದೇ ನಿರ್ಮಾಣವಾಗಿದೆ. ದೇವರ ಹಸ್ತಗಳಲ್ಲಿ ಈ ಸಭೆ "ಆಧಾರವೂ ಮತ್ತು ಸ್ತಂಭವೂ ಆಗಿದ್ದು" ಲೋಕದ ಎದುರು ಸತ್ಯವನ್ನು (ದೇವರ ವಾಕ್ಯವನ್ನು) ಪ್ರಚುರಪಡಿಸುತ್ತದೆ. ಇದು ಸತ್ಯದ ಅಡಿಪಾಯವಾಗಿದೆ ಯಾಕಂದರೆ ಯೇಸು ಕ್ರಿಸ್ತನು ಇದರ ಶಿರಸ್ಸಾಗಿದ್ದಾನೆ ಮತ್ತು ಇದರ ಅಡಿಪಾಯವಾಗಿದ್ದಾನೆ. 16

**3:16** *"ದೇವಭಕ್ತಿಯ ಸತ್ಯಾರ್ಥ"*– ದೇವರಿಗೆ ಮತ್ತು ಆತನ ಸಭೆಗೆ ಸೇರಿದವರ ಗುಣಲಕ್ಷಣಗಳು ಹೇಗಿರಬೇಕೆಂಬದರ ಬಗ್ಗೆ ಪೌಲನು ಮಾತನಾಡುತ್ತಾ ಇದ್ದಾನೆ. ದೇವರು ಪ್ರಕಟಿಸಿರುವ ಎಲ್ಲಾ ಸತ್ಯಗಳ ಹಾಗೆ ಇದು "ರಹಸ್ಯವಾಗಿದೆ". ರೋಮಾ 16:25-26; ಎಫೆ 3:2-6; 5:32; ಕೊಲೊ 1:26-27 ನೋಡಿರಿ. ಹೊಸ ಒಡಂಬಡಿಕೆಯಲ್ಲಿ ರಹಸ್ಯವು ಸತ್ಯಾರ್ಥವಾಗಿದ್ದು ದೇವರು ಪ್ರಕಟಿಸದೆ ಹೋದರೆ ಮಾನವರಿಂದ ತಿಳಿದುಕೊಳ್ಳಲು ಆಗುವದಿಲ್ಲ. "ದೈವೀಕತೆ" –ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದದ ಅರ್ಥ ಭಯಭಕ್ತಿ. ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲಾಗಿರುವ ಪ್ರಕಾರ ನೋಡುವದಾದರೆ ಇದರ ಅರ್ಥ ದೇವರಲ್ಲಿ ನಿಜವಾದ ಭಯಭಕ್ತಿಯುಳ್ಳವರಾಗಿ ದೇವರು ಪ್ರಕಟಿಸಿರುವ ಬೋಧನೆಗನುಸಾರ ಜೀವಿಸುವದಾಗಿದೆ. 2:2; 4:7-8; 6:3,5,6,11; 2 ತಿಮೊ 3:5; ತೀತ

1:1 ರೊಂದಿಗೆ ಹೋಲಿಸಿ ನೋಡಿರಿ.

*"ದೇವರು ಪ್ರತ್ಯಕ್ಷನಾದನು"*– ದೇವರಾಗಿದ್ದ ಯೇಸು ಕ್ರಿಸ್ತನು ಮಾನವನಾಗಿ ಬಂದನು – ಯೋಹಾನ 1:14. ಫಿಲಿಪ್ಪಿ 2:6; ಲೂಕ 2:11 ರಲ್ಲಿ ನೋಟ್ಸ್ ನೋಡಿರಿ.

*"ಶರೀರಧಾರಿಯಾಗಿ"*– ಯೋಹಾನ 1:14; ರೋಮಾ 8:3; ಇಬ್ರಿ 2:14; 10:5.

*"ಆತ್ಮ ಸಂಬಂಧವಾಗಿ"*– ಮತ್ತಾಯ 3:16; 12:28; ಯೋಹಾನ 1:32-34; ರೋಮಾ 1:4. ಯೇಸು ಕ್ರಿಸ್ತನ ಜೀವಿತದಲ್ಲಿ ಮತ್ತು ಸತ್ತವರೊಳಗಿಂದ ಎದ್ದು ಬಂದ ಆತನ ಪುನರುತ್ಥಾನದಲ್ಲಿ ಯೇಸು ಕ್ರಿಸ್ತನು ಪರಿಶುದ್ಧನು, ನಿಷ್ಕಳಂಕನು, ದೇವರ ನೀತಿಯುಳ್ಳ ಕುಮಾರನು ಎಂಬದನ್ನು ದೇವರಾತ್ಮನು ಪ್ರಕಟಿಸಿದನು.

*"ದೇವದೂತರು"*– ಆದಿ 16:7 ರ ನೋಟ್ಸ್ ನೋಡಿರಿ. ಯೇಸು ಕ್ರಿಸ್ತನ ಜನನ, ಅರಣ್ಯದಲ್ಲಿ ಆತನಿಗೆದುರಾದ ಶೋಧನೆ, ಆತನ ಪುನರುತ್ಥಾನ ಮತ್ತು ಆತನು ಪರಲೋಕಕ್ಕೆ ಆರೋಹಣವಾಗುವ ಸಮಯದಲ್ಲಿ ದೇವದೂತರು ಆತನೊಂದಿಗಿದ್ದರು (ಲೂಕ 2:9-15; ಮಾರ್ಕ 1:13; ಮತ್ತಾಯ 28:5; ಅಪೊ 1:10-11; ಇಬ್ರಿ 1:6).

*"ಅನ್ಯಜನರಿಗೆ"*– ಮತ್ತಾಯ 28:18-19; ಎಫೆ 3:8-9; ಕೊಲೊ 1:23.

*"ನಂಬಲ್ಪಟ್ಟನು"*– ಅಪೊ 4:4; 5:14; 9:42; 11:21; 14:1; 17:12; 18:8; 19:18; 21:20.

*"ಪ್ರಭಾವ"*– ಲೂಕ 24:51; ಅಪೊ 1:9; ಎಫೆ 1:20-21.

# 4[1]

**4:1** *"ಆತ್ಮ"*– ದೇವರಾತ್ಮನು ಭವಿಷ್ಯವನ್ನು ಪ್ರಕಟಿಸುತ್ತಾನೆ. ಯೆಶಾಯ 46:10 ರೊಂದಿಗೆ ಹೋಲಿಸಿ ನೋಡಿರಿ. ಸುಳ್ಳು ಬೋಧಕರು ಮತ್ತು ಸುಳ್ಳು ಪ್ರವಾದಿಗಳು ಬರುವರು ಎಂಬದು ದೇವರಿಗೆ ಮೊದಲೇ ತಿಳಿದಿತ್ತು, ಆದ್ದರಿಂದ ಆತನು ಸತ್ಯವೇದದ ಅನೇಕ ಕಡೆಗಳಿಗೆ ತನ್ನ ಜನರಿಗೆ ಎಚ್ಚರಿಕೆಗಳನ್ನು ಕೊಟ್ಟಿದ್ದಾನೆ – ಮತ್ತಾಯ 7:15; 24:4-5,24; ಅಪೊ 20:29-30; ರೋಮಾ 16:16-17; 2 ಕೊರಿಂಥ 11:13-15; 2 ತಿಮೊ 3:1; 4:3; 2

ಪೇತ್ರ 2:1.

*“ನಂಬಿಕೆಯಿಂದ”*– ಇದರ ಅರ್ಥವೇನೆಂದರೆ ದೇವರು ಪ್ರಕಟಿಸಿರುವ ಸತ್ಯದ ದೇಹ, ನಿಜವಾದ ವಿಶ್ವಾಸಿಗಳು ಅಂಗೀಕರಿಸಿಕೊಂಡಿರುವ ಸತ್ಯ.

*“ವಂಚಿಸುವ ಆತ್ಮಗಳು”*– ಮತ್ತಾಯ 4:24. ಆತ್ಮಗಳ ಅದೃಶ್ಯವಾದ ಲೋಕದಲ್ಲಿ ಕೆಲವು ಆತ್ಮಗಳು ಕ್ರೈಸ್ತರನ್ನು ದೇವರ ಸತ್ಯದಿಂದ ದೂರ ನಡೆಸುವ ಸಲುವಾಗಿ ಅವರಿಗೆ ಸುಳ್ಳು ಬೋಧನೆಗಳನ್ನು ಕಲಿಸಲು ಪ್ರಯತ್ನಿಸುತ್ತವೆ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು. ಎಫೆ 6:11-12 ರೊಂದಿಗೆ ಹೋಲಿಸಿ ನೋಡಿರಿ. 2

**4:2** ಸಭೆಗಳೊಳಗೆ ಸುಳ್ಳು ಬೋಧನೆಗಳನ್ನು ಪರಿಚಯಪಡಿಸಲು ದುರಾತ್ಮಗಳು ಉಪಯೋಗಿಸಿಕೊಳ್ಳುವ ಮನುಷ್ಯರ ಬಗ್ಗೆ ಪೌಲನು ಈಗ ಮಾತನಾಡುತ್ತಾ ಇದ್ದಾನೆ.

*“ಕಪಟಿಗಳಾಗಿ ಸುಳ್ಳು ಹೇಳುವದು”*– ಅವರು ಕಲಿಸುವ ಬೋಧನೆಗಳನ್ನು ಅವರೇ ನಂಬುವದಿಲ್ಲ. ಹಾಗೆಯೇ ಅವರಿಗೆ ಸುಳ್ಳು ಹೇಳುವದೇ ಸಮಸ್ಯೆಯೇ ಆಗುವದಿಲ್ಲ. ಈ ರೀತಿ ತಾವು ಯಾರ ಮಕ್ಕಳು ಎಂಬದನ್ನು ಅವರು ಪ್ರಕಟಿಸುತ್ತಾರೆ – ಯೋಹಾನ 8:44. “ಅಪರಾಧಿಗಳೆಂಬ” ಮನಸ್ಸಾಕ್ಷಿ ಮೃತವಾಗಿದೆ ಮತ್ತು ಮೌನವಾಗಿರುತ್ತದೆ. ಎಫೆ 4:19 ರೊಂದಿಗೆ ಹೋಲಿಸಿ ನೋಡಿರಿ. 3

**4:3** ಈ ಸುಳ್ಳು ಬೋಧಕರು ಈ ಎರಡು ಕಾರ್ಯಗಳನ್ನು ಮಾತ್ರವೇ ನಿಷೇಧಿಸುತ್ತಾರೆ ಎಂದು ನಾವು ಯೋಚಿಸಬಾರದು. ಇವುಗಳಲ್ಲದೆ ಇನ್ನೂ ಅನೇಕ ಕಾರ್ಯಗಳೂ ಅವೆ. ಆದರೆ ಅವರ ಬೋಧನೆಗಳು ದೇವರ ವಾಕ್ಯದ ಮೇಲೆ ಆಧಾರವಾಗಿಲ್ಲ ಎಂಬದಕ್ಕೆ ಈ ಎರಡು ವಿಷಯಗಳು ಸಾಕಾಗಿವೆ. ನಿಜವಾಗಿ ಹೇಳುವದಾದರೆ ಅವರು ಸತ್ಯವೇದವನ್ನು ಮೀರಿ ತಮ್ಮ ಬೋಧನೆಯನ್ನು ಕೊಡುತ್ತಾರೆ. ಇದು ಅತ್ಯಂತ ಅಪಾಯಕಾರಿಯಾಗಿರುವ ಸುಳ್ಳು ಬೋಧನೆಗಳಲ್ಲಿ ಒಂದಾಗಿದೆ.

*“ಮದುವೆಯಾಗಬಾರದೆಂದು ಹೇಳುವರು”*– ಆದಿ 1:27-28; 2:22-24; ಮತ್ತಾಯ 19:4-6; ಇಬ್ರಿ 13:4 ನೋಡಿರಿ. “ನಿಷೇಧ” ಎಂಬದು ಪರಿಣಾಮಕಾರಿಯಾದ ಪದವಾಗಿದೆ. ಪೌಲನು 1 ಕೊರಿಂಥ 7ನೇ ಅಧ್ಯಾಯದಲ್ಲಿ ಪೌಲನು ಉಪಯೋಗಿಸಿರುವ ಭಾಷೆಯೊಂದಿಗೆ ಹೋಲಿಸಿ ನೋಡಿರಿ (1 ಕೊರಿಂಥ 7:2,25,26 ಇತ್ಯಾದಿ). ಸಭೆಗೆ ತೊಂದರೆ ಎದುರಾಗುತ್ತಿದ್ದ ಸಮಯದಲ್ಲಿಯೂ ಅವನು ಯಾರಿಗೂ ಮದುವೆಯಾಗಬೇಡಿರಿ ಎಂದು

ಹೇಳಲಿಲ್ಲ, ಬದಲಾಗಿ ಕೆಲವು ಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದನು. ಇಬ್ರಿ 13:4 ನೋಡಿರಿ. ಮದುವೆಯಾಗಬಾರದೆಂದು ಇನ್ನೊಬ್ಬರ ಮೇಲೆ ನಿಷೇಧ ಹೇರಲು ಭೂಲೋಕದಲ್ಲಿ ಯಾರಿಗೂ ಅಧಿಕಾರ ಇರುವದಿಲ್ಲ. ಸತ್ಯವೇದದಲ್ಲಿ ಅಂಥ ಯಾವುದೇ ಸೂಚನೆ ಇಲ್ಲ, ಇಲ್ಲಿ ಪೌಲನು ಹೇಳುತ್ತಾ ಇರುವದೇನೆಂದರೆ ಈ ಬೋಧನೆಯು ದೇವರಿಂದ ಅಲ್ಲ ಬದಲಾಗಿ ದುರಾತ್ಮಗಳು ಮತ್ತು ಕಪಟಿಗಳಾಗಿರುವ ಸುಳ್ಳುಗಾರರಿಂದ ಬರುತ್ತದೆ.

*"ಆಹಾರಗಳು"*– ಆದಿ 1:29; 9:3; ಮಾರ್ಕ 7:19; ಅಪೊ 10:9-16; ರೋಮಾ 14:14,20. "ತಿನ್ನಬಾರದು" ಎಂಬ ಪದವನ್ನು ಗಮನಿಸಿರಿ. ಊಟದ ವಿಷಯದಲ್ಲಿ ಇತರರ ಮೇಲೆ ಅಧಿಕಾರ ನಡೆಸಲು ಪ್ರಯತ್ನಿಸುವದು-ಏನನ್ನು ತಿನ್ನಬೇಕು ಅಥವಾ ಅದನ್ನು ಯಾವಾಗ ತಿನ್ನಬೇಕು-ಎಂಬ ವಿಷಯಗಳು ಹೊಸ ಒಡಂಬಡಿಕೆಯ ಬೋಧನೆಗೆ ಅನುಸಾರವಾದವುಗಳಲ್ಲ. ಪೌಲನು ರೋಮಾ 14 ನೇ ಅಧ್ಯಾಯದಲ್ಲಿ ಪೌಲನು ಕಲಿಸಿರುವ ಬೋಧನೆಯೊಂದಿಗೆ ಹೋಲಿಕೆ ಮಾಡಿರಿ. ಹೊಸ ಒಡಂಬಡಿಕೆಯ ಪ್ರಕಾರ ದೇವರು ನಿಷೇಧಿಸುವಂಥ ಆಹಾರ ಯಾವುದೂ ಇಲ್ಲ. ಭೂಲೋಕದ ಮೇಲಿರುವ ಪ್ರತಿಯೊಂದು ಧರ್ಮದ ಬಹುತೇಕ ಜನರು ಒಂದುವೇಳೆ ನಾವು ಕೆಲವು ರೀತಿಯ ಆಹಾರದಿಂದ ದೂರವಿದ್ದರೆ ಮತ್ತು ಮದುವೆ ಮಾಡಿಕೊಳ್ಳದೆ ಇದ್ದರೆ ಹೆಚ್ಚು ಆತ್ಮೀಕರಾಗಿರುತ್ತೇವೆ ಹಾಗೂ ಇತರರಿಗಿಂತ ಪರಿಶುದ್ಧರಾಗಿರುತ್ತೇವೆ ಎಂಬದಾಗಿ ಯೋಚಿಸುತ್ತಾರೆ. ಬಹುಶಃ ಈ ಒಂದು ಕಾರಣದಿಂದಲೇ ಸೈತಾನನು ಇಂಥ ಬೋಧನೆಗಳು ಹೊರಬರುವಂತೆ ಬಯಸುತ್ತಾನೆ. ಇದಲ್ಲದೆ ಅವನು ಜನರ ನಡುವೆ ಸುಳ್ಳು ಮತ್ತು ನಾಶನಕರವಾದ ನೀತಿ ಹಾಗೂ ಪರಿಶುದ್ಧತೆಯನ್ನು ಪ್ರಚುರಪಡಿಸಲು ಮಾರ್ಗಗಳನ್ನು ಕಂಡುಕೊಳ್ಳುತ್ತಾನೆ. ದುರಾತ್ಮಗಳು ಜನರು ಊಟ ಅಥವಾ ದೇಹ ದಂಡನೆ ಅಥವಾ ತಮ್ಮನ್ನು ನಿರಾಕರಿಸುವದು ಅಥವಾ ಜೀವಿಸುವ ದೇವರ ವಾಕ್ಯಕ್ಕೆ ಬದಲಾಗಿ ಬೇರೆಯವುಗಳನ್ನು ನಿರಾಕರಿಸುವದರ ಬಗ್ಗೆ ಯೋಚನೆಗಳಲ್ಲಿ ಮುಳುಗುವಂತೆ ಮಾಡುತ್ತವೆ. ಕೊಲೊ 2:20-23 ರೊಂದಿಗೆ ಹೋಲಿಸಿ ನೋಡಿರಿ. ಇಂಥ ಕಾರ್ಯಗಳು ನಮ್ಮನ್ನು ದೇವರಿಗೆ ಅಂಗೀಕೃತರನ್ನಾಗಿ ಮಾಡುತ್ತವೆ ಎಂಬ ಬೋಧನೆಗಳ ಮೂಲ ದುರಾತ್ಮಗಳೇ ಆಗಿರುತ್ತವೆ. ನಾವು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಮತ್ತು ನಮ್ಮ ಜೀವಿತವನ್ನು ಆತನಿಗೆ ಒಪ್ಪಿಸಿರುವದರಿಂದ ಮಾತ್ರವೇ ದೇವರಿಗೆ ಅಂಗೀಕೃತರಾಗುತ್ತೇವೆ. ಇದನ್ನು ಬಿಟ್ಟರೆ ನಮಗೆ ಯಾವ ಆಜ್ಞೆಗಳೂ ಬೇಕಾಗಿಲ್ಲ. ಇದನ್ನು ಬಿಟ್ಟರೆ ನಮಗೆ ಯಾವ ನೀತಿವಂತಿಕೆಯೂ ಬೇಕಾಗಿಲ್ಲ.

*"ಕೃತಜ್ಞತಾಸ್ತುತಿ"*– ಮತ್ತಾಯ 14:19; 26:26; ರೋಮಾ 14:6; ಕೊಲೊ 2:6-7; 1

ಥೆಸ 5:18. 4

**4:4** *"ಒಳ್ಳೇದೇ"*– ಆದಿ 1:1,31. ದೇವರು ಎಲ್ಲವುಗಳ ಮಹಾ ಸೃಷ್ಟಿಕರ್ತನು ಮತ್ತು ಆತನು ಉಂಟುಮಾಡಿರುವದರಲ್ಲಿ ಯಾವುದೇ ಕೆಟ್ಟದ್ದು ಇಲ್ಲ ಎಂಬದನ್ನು ಪೌಲನು ತಿಮೊಥೆಯನಿಗೆ ನೆನಪು ಮಾಡುತ್ತಾ ಇದ್ದಾನೆ. ಯಾವುದರಲ್ಲಿಯೂ ಆತನು ಮಾನವನಿಗೆ ಇಂಥದ್ದನ್ನು ನೇಮಿಸಿಲ್ಲ (ಅಂದರೆ ಮದುವೆಯಲ್ಲಿಯೂ) ಅಂದರೆ ಪರಿಶುದ್ಧತೆ ಮತ್ತು ಆತ್ಮೀಕತೆಗೆ ವಿರುದ್ಧವಾಗಿ ಸ್ವಲ್ಪವೂ ಏನೂ ಇಲ್ಲ. ಮತ್ತು ಊಟದ ವಿಷಯದಲ್ಲಿ ಯಾವುದೇ ನಿಷೇಧವೂ ಇಲ್ಲ. 5

**4:5** ದೇವರ ವಾಕ್ಯವು ಮಾನವರ ಉಪಯೋಗಕ್ಕಾಗಿ ಪ್ರತಿಯೊಂದು ರೀತಿಯ ಆಹಾರವನ್ನು ಪ್ರತಿಷ್ಠಿಸಿದ್ದಾನೆ. 3 ನೇ ವಾಕ್ಯದ ಸೂಚನೆಗಳನ್ನು ನೋಡಿರಿ. ಕೃತಜ್ಞತಾಸ್ತುತಿಯ ಪ್ರಾರ್ಥನೆಯು ಪ್ರಾರ್ಥನೆ ಮಾಡುವವರಿಗೆ ಆಹಾರವನ್ನು "ಶುದ್ಧ" ಮಾಡುತ್ತದೆ ಮತ್ತು ಪರಿಶುದ್ಧಗೊಳಿಸುತ್ತದೆ. 6

**4:6** *"ಕ್ರಿಸ್ತ ಯೇಸುವಿನ ಒಳ್ಳೇ ಸೇವಕನು"*– ಸಭೆಯಲ್ಲಿರುವ ಪ್ರತಿಯೊಬ್ಬ ಬೋಧಕ, ಪ್ರತಿಯೊಬ್ಬ ನಾಯಕ, ಪ್ರತಿಯೊಬ್ಬ ಉಪದೇಶಕ, ಪ್ರತಿಯೊಬ್ಬ ಸೌವಾರ್ತಿಕ, ತನ್ನ ಪೂರ್ಣ ಪ್ರಾಣ, ಮನಸ್ಸು, ಬುದ್ದಿ ಮತ್ತು ಶಕ್ತಿಯಿಂದ ಹೀಗಾಗಲು ಪ್ರಯತ್ನಿಸಬೇಕು. ಒಂದುವೇಳೆ ಅವರು ಹೀಗಾಗಬೇಕೆಂದು ಬಯಸುವದಾದರೆ ದೇವರು ಪ್ರಕಟಿಸಿರುವ ಸತ್ಯವನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು ಮತ್ತು ನಂಬಿಕೆಯಿಂದ ಧೈರ್ಯವಾಗಿ ಅವುಗಳನ್ನು ಇತರರಿಗೆ ಪ್ರಕಟಿಸಬೇಕು. 7

**4:7** *"ಪ್ರಾಪಂಚಿಕವಾದ ಕಥೆಗಳು"*– 1:4.

*"ಅಜ್ಜೀಕಥೆಗಳು"*– ಪೌಲನ ಮಾತಿನ ಅರ್ಥ ವಾಸ್ತವದಲ್ಲಿ ಮತ್ತು ಚರಿತ್ರೆಯಲ್ಲಿ ಯಾವುದೇ ಆಧಾರವಿಲ್ಲದ ಪ್ರಾಚೀನ ಕಥೆಗಳು ಅಂದರೆ ಸತ್ಯವಲ್ಲದ ಧಾರ್ಮಿಕ ಕಥೆಗಳು.

*"ದೇವಭಕ್ತಿ"*– ನುಡಿದಂತೆ ನಡೆಯುವ ನಿಜವಾದ ಕ್ರೈಸ್ತೀಯ ಜೀವಿತ, ಪ್ರತಿಯೊಬ್ಬ ಕ್ರೈಸ್ತನು ಜೀವಿಸಲು ಕಲಿತುಕೊಳ್ಳಬೇಕಾದ ನಂಬಿಕೆಯ ಜೀವಿತವನ್ನು ಸೂಚಿಸಲು ಪೌಲನು ಗ್ರೀಕ್ ಪದವನ್ನು ಉಪಯೋಗಿಸಿದ್ದಾನೆ. ಇದರ ಅರ್ಥ ಅವರು ತಮ್ಮನ್ನು ತರಬೇತುಗೊಳಿಸಿಕೊಳ್ಳಬೇಕು, ಈ ಕಾರ್ಯವನ್ನು ಮಾಡುವದರಲ್ಲಿ ತಮ್ಮನ್ನು ಕ್ರಮಶಿಕ್ಷಣಕ್ಕೆ ಒಳಪಡಿಸಿಕೊಳ್ಳಬೇಕು. ಇಬ್ರಿ 5:14; 1 ಕೊರಿಂಥ 9:24-27 ರೊಂದಿಗೆ ಹೋಲಿಸಿ ನೋಡಿರಿ. ಕ್ರೀಡಾಪಟು ತನ್ನನ್ನು ಶಾರೀರಿಕ ವಿಷಯಗಳಲ್ಲಿ

ತರಬೇತಿಗೊಳಿಸಿಕೊಳ್ಳುವ ಹಾಗೆ ಯೇಸು ಕ್ರಿಸ್ತನ ಸೇವಕನು ತನ್ನನ್ನು ಮಾನಸಿಕ ಹಾಗೂ ಆತ್ಮೀಕ ವಿಷಯಗಳಲ್ಲಿ ತರಬೇತಿಗೊಳಿಸಿಕೊಳ್ಳಬೇಕು. 8

**4:8** *"ವಾಗ್ದಾನವನ್ನು ಬಿಗಿಯಾಗಿ ಹಿಡಿದುಕೊಳ್ಳುವದು"*– ದೈವೀಕತೆಯು ಈಗ ಮತ್ತು ಭವಿಷ್ಯದಲ್ಲಿ ನಮಗೆ ದೇವರ ಆಶೀರ್ವಾದಗಳನ್ನು ಒದಗಿಸುತ್ತದೆ. ದೇವಭಕ್ತಿಯಿಲ್ಲದವರಿಗೆ ದೇವರಿಂದ ಈಗ ಅಥವಾ ನಂತರ ಒಳ್ಳೆಯವುಗಳನ್ನು ನಿರೀಕ್ಷಿಸಲು ಯಾವುದೇ ಹಕ್ಕು ಇಲ್ಲ. 10

**4:10** *"ಕಷ್ಟಪಡುತ್ತೇವೆ"*– 1 ಕೊರಿಂಥ 15:10; ಕೊಲೊ 1:29.

*"ಜೀವಿಸುವ ದೇವರು"*– 3:15. ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗೆ "ಜೀವವುಳ್ಳ ದೇವರ" ಮೇಲೆ "ಸಜೀವವಾದ ನಿರೀಕ್ಷೆಯಿದೆ" (1 ಪೇತ್ರ 1:3).

*"ರಕ್ಷಕನು"*– ಎಲ್ಲಾ ಮಾನವರು ರಕ್ಷಣೆ ಹೊಂದುವರು ಎಂದು ಪೌಲನು ಹೇಳುತ್ತಾ ಇಲ್ಲ. ದೇವರು ಎಲ್ಲರನ್ನೂ ರಕ್ಷಿಸುತ್ತಾನೆ ಮತ್ತು ಅವರು ಈ ಲೋಕವನ್ನು ಬಿಟ್ಟು ಹೋಗುವ ಸಮಯ ಬರುವ ತನಕ ಅವರಿಗೆ ಎಲ್ಲವನ್ನೂ ಒದಗಿಸುತ್ತಾನೆ ಎಂದು ಹೇಳುತ್ತಾ ಇದ್ದಾನೆ (ಅಪೊ 14:17; 17:25-27). ಇದು ಮಾತ್ರವಲ್ಲ – ಆತನು ಕ್ಷಮಿಸಲು ಸಿದ್ಧನಾಗಿದ್ದಾನೆ ಮತ್ತು ಯಾರೆಲ್ಲಾ ಆತನ ನಿತ್ಯವಾದ ರಕ್ಷಣೆಯನ್ನು ಹೊಂದಲು ಬಯಸುತ್ತಾರೆ ಅದನ್ನು ಅವರಿಗೆ ಕೊಡುತ್ತಾನೆ (ಯೆಶಾಯ 45:22). ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಆತನ ಕಡೆಗೆ ತಿರುಗಿಕೊಂಡಿದ್ದಾರೆ ಆದ್ದರಿಂದ ಆತನು ವಾಕ್ಯದ ಅರ್ಥವಿರುವ ಪ್ರತಿಯೊಂದು ರೀತಿಯಲ್ಲಿಯೂ ಅವರಿಗೆ ರಕ್ಷಕನಾಗಿದ್ದಾನೆ (1:1). 11

**4:11** *"ಆಜ್ಞಾಪಿಸಬೇಕು ಮತ್ತು ಬೋಧಿಸಬೇಕು"*– ಯೇಸು ಕ್ರಿಸ್ತನ ನಿಜವಾದ ಸೇವಕರು ಅಧಿಕಾರದಿಂದ ಮಾತನಾಡುತ್ತಾರೆ. ಅವರು ಹಾಗೆಯೇ ಮಾತನಾಡಬೇಕು. ಅವರು ಭೂಲೋಕದ ಮೇಲೆ ಸಭೆಯನ್ನು ಪ್ರತಿನಿಧಿಸುತ್ತಾರೆ. ಆತ್ಮೀಕ ವಿಷಯಗಳಲ್ಲಿ ದೇವರೇ ಅವರಿಗೆ ಸತ್ಯದ ಪ್ರಕಟನೆಯನ್ನು ನೀಡಿದ್ದಾನೆ. ಅವರು ಸಂದೇಹ ಹುಟ್ಟಿಸುವಂಥ ವಿಷಯಗಳನ್ನು ಅಥವಾ ಕಲ್ಪನಾಕಥೆಗಳನ್ನು ಅಥವಾ ಅಜ್ಜೀಕಥೆಗಳನ್ನು ಬೋಧಿಸುತ್ತಾ ಇಲ್ಲ. ಇದಲ್ಲದೆನಾವು ಸಂದೇಹ ಬರುವಂಥ ವಿಷಯಗಳನ್ನು ಬೋಧಿಸುತ್ತಾ ಇದ್ದೇವೆ ಎಂಬ ಭಾವನೆಯನ್ನೂ ಮೂಡಿಸಬಾರದು. 1 ಪೇತ್ರ 4:11 ನೋಡಿರಿ.

*"ಈ ಸಂಗತಿಗಳು"*– ದೇವರು ಪ್ರಕಟಿಸಿರುವ ಸಂಗತಿಗಳೇ ಹೊರತು 4:3 ರಲ್ಲಿ ಹೇಳಲಾಗಿರುವ ಸಂಗತಿಗಳಲ್ಲ. ದೇವರು ತನ್ನ ವಾಕ್ಯದಲ್ಲಿ ಪ್ರಕಟಿಸದೆ ಇರುವದನ್ನು

ಆಜ್ಞಾಪಿಸಲು ಅಥವಾ ಬೋಧಿಸಲು ಸಭೆಯ ಯಾವುದೇ ನಾಯಕನಿಗೂ ಅಧಿಕಾರವಿಲ್ಲ. 12

**4:12** *"ಯೌವನಸ್ಥನು"*– ಎಫೆಸದ ಸಭೆಯ ನಾಯಕನಾಗಿದ್ದ ತಿಮೊಥೆಯನು, ಅಲ್ಲಿದ್ದ ಅನೇಕ ಕ್ರೈಸ್ತರಿಗಿಂತ ಚಿಕ್ಕವನಾಗಿದ್ದನು. ಆದರೆ ದೇವರು ಅವನನ್ನು ಆ ಸ್ಥಾನದಲ್ಲಿ ನೇಮಕ ಮಾಡಿದ್ದನು, ಆದ್ದರಿಂದ ಅವನು ದೇವರ ವಾಕ್ಯವನ್ನು ಅಧಿಕಾರದಿಂದ ಮಾತನಾಡಬೇಕಾಗಿತ್ತು ಮತ್ತು ತಾನು ಯೌವನಸ್ಥನಾಗಿರುವದರಿಂದ ತನ್ನನ್ನು ಅಸಡ್ಡೆ ಮಾಡುವದಕ್ಕೆ ಯಾರಿಗೂ ಅವಕಾಶ ಕೊಡಬಾರದು.

*"ಮಾದರಿಯಾಗಿರು"*– ಪ್ರತಿಯೊಬ್ಬ ಕ್ರೈಸ್ತ ನಾಯಕನು ಮಾದರಿಯಾಗಿರಲೇಬೇಕು (1 ಪೇತ್ರ 5:3; 1 ಕೊರಿಂಥ 11:1; ಫಿಲಿಪ್ಪಿ 3:17; 2 ಥೆಸ 3:7). ಒಂದುವೇಳೆ ಅವನು ಒಳ್ಳೆಯ ಮಾದರಿಯಾಗಿಲ್ಲವೆಂದರೆ ಅವನು ನಾಯಕನಾಗಿರಬಾರದು.

*"ಪ್ರೀತಿ . . . ಶುದ್ಧತ್ವ"*– ಪೂರ್ಣವಾದ ಕ್ರೈಸ್ತೀಯ ಜೀವಿತಕ್ಕೆ ಪ್ರಾಮುಖ್ಯವಾಗಿರುವ ಸಂಗತಿಗಳನ್ನು ಪೌಲನು ಇಲ್ಲಿ ತಿಳಿಸಿದ್ದಾನೆ. ಇವುಗಳಲ್ಲಿ ಒಂದನ್ನಾದರೂ ತೆಗೆಯಲು ಮತ್ತು ಆ ರೀತಿಯ ಜೀವಿತವನ್ನು ಹೊಂದಲು ಆಗುವದಿಲ್ಲ. ದುಃಖದ ವಿಷಯವೇನೆಂದರೆ ಕೆಲವು ಬೋಧಕರು ಒಂದರಲ್ಲಿ ಅಥವಾ ಇನ್ನೊಂದರಲ್ಲಿ ಆಸಕ್ತಿ ತೋರಿಸುತ್ತಾರೆ ಮತ್ತು ಉಳಿದವುಗಳನ್ನು ನಿರಾಕರಿಸುತ್ತಾರೆ. 13

**4:13** *"ವೇದಪಾರಾಯಣ"*– ಹೊಸ ಒಡಂಬಡಿಕೆಯಂತೆಯೇ ಇಲ್ಲಿ ಉಪಯೋಗಿಸಲಾಗಿರುವ ಗ್ರೀಕ್ ಪದದ ಅರ್ಥ ಸಭೆಯಲ್ಲಿ ಅಥವಾ ಸಭಾಮಂದಿರದಲ್ಲಿ ಸಾರ್ವಜನಿಕವಾಗಿ ಸತ್ಯವೇದವನ್ನು ಓದುವದು ಎಂಬದಾಗಿದೆ. ಯೆಹೂದ್ಯರು ಸಾರ್ವಜನಿಕ ಆರಾಧನೆಗಾಗಿ ಕೂಡಿ ಬರುವಾಗ ಈ ಅಭ್ಯಾಸವನ್ನು ಮಾಡುತ್ತಾ ಇದ್ದರು. ಲೂಕ 4:16-17; ಎಜ್ರ 8:1-3; ಅಪೊ 13:15. ಸಭೆ ಪ್ರಾರಂಭವಾದ ನಂತರ ಕ್ರೈಸ್ತರು ಈ ಅಭ್ಯಾಸವನ್ನು ಮುಂದುವರೆಸಿದರು (ಕೊಲೊ 4:16-17; 1 ಥೆಸ 5:27). ಈ ಅಭ್ಯಾಸವು ಆಗಿನ ದಿನದಲ್ಲಿ ಅತ್ಯಂತ ಪ್ರಾಮುಖ್ಯ ಮತ್ತು ಲಾಭದಾಯಕವಾಗಿತ್ತು ಯಾಕಂದರೆ ಪ್ರತಿಯೊಬ್ಬ ಕ್ರೈಸ್ತನ ಬಳಿಯೂ ಸತ್ಯವೇದ ಇರಲಿಲ್ಲ ಹಾಗೂ ಒಂದುವೇಳೆ ಎಲ್ಲರೂ ಸತ್ಯವೇದವನ್ನು ತೆಗೆದುಕೊಂಡರೂ ಅವರಲ್ಲಿ ಅನೇಕರಿಗೆ ಓದಲು ಗೊತ್ತಿರಲಿಲ್ಲ. ಇಂದಿಗೂ ಲೋಕದ ಬಹುತೇಕ ಭಾಗಗಳಲ್ಲಿ ಸಾರ್ವಜನಿಕವಾಗಿ ಸತ್ಯವೇದವನ್ನು ಓದುವದು ಅತ್ಯಂತ ಲಾಭದಾಯಕವಾಗಿದೆ.

*"ಉಪದೇಶ"*– ಸಭಾಪಾಲಕನು ಕಲಿಸಬೇಕು ಮತ್ತು ಉಪದೇಶ ಮಾಡಬೇಕು ಎಂಬದನ್ನು ಗಮನಿಸಿರಿ. ಉಪದೇಶ ಮಾಡುವದು ಚಿತ್ತ ಮತ್ತು ಮನಸ್ಸಾಕ್ಷಿ ಹಾಗೂ ಕೇಳುಗನ ಮನಸ್ಸಿನ

ಮೇಲೆ ಪ್ರಭಾವ ಬೀರುತ್ತದೆ. ಕಲಿಸುವದು ಕ್ರೈಸ್ತೀಯ ನಂಬಿಕೆಯ ಸತ್ಯಗಳಲ್ಲಿ ಜನರಿಗೆ ಸೂಚನೆಗಳನ್ನು ಕೊಡುವದಾಗಿದೆ. ಇದು ವಿಶ್ವಾಸಿಗಳ ಮನಸ್ಸುಗಳ ಮೇಲೆ ಅತ್ಯಧಿಕವಾದ ಪ್ರಭಾವವನ್ನು ಬೀರುತ್ತದೆ (ಆದರೆ, ಖಂಡಿತವಾಗಿಯೂ ಮನಸ್ಸಾಕ್ಷಿಯನ್ನು ಅಸಡ್ಡೆ ಮಾಡಬಾರದು). ಕ್ರೈಸ್ತೀಯ ಸಭಾಪಾಲಕನ ಸೇವೆಯಲ್ಲಿ ಇವೆರೆಡೂ ಪ್ರಾಮುಖ್ಯವಾದ ಸ್ಥಾನವನ್ನು ಹೊಂದಿವೆ. **14**

**4:14** *“ಅಲಕ್ಷ್ಯ ಮಾಡಬೇಡ”*– ದೇವರು ಮಾನವರಿಗೆ ಕೊಡುವ ಯಾವ ವರವನ್ನು ಬೇಕಾದರೂ ನಿರ್ಲಕ್ಷ್ಯ ಮಾಡುವ ಸಾಧ್ಯತೆಯಿದೆ. ಮತ್ತಾಯ 25:24-27 ರೊಂದಿಗೆ ಹೋಲಿಕೆ ಮಾಡಿರಿ.

*“ವರ”*– 2 ತಿಮೊ 1:6. ಪೌಲನು ಆತ್ಮೀಕ ಸಾಮರ್ಥ್ಯದ ಬಗ್ಗೆ ಮಾತನಾಡುತ್ತಾ ಇದ್ದಾನೆ. ರೋಮಾ 12:6-8; 1 ಕೊರಿಂಥ 1:7; 12:4-11,28; 14:1 ನೋಡಿರಿ.

*“ಪ್ರವಾದನೆಯ ಸಹಿತವಾಗಿ”*– 1:18. ಪ್ರವಾದನಾ ಸಂದೇಶವನ್ನು ಕೊಡುವ ಸಾಮರ್ಥ್ಯವು ಪವಿತ್ರಾತ್ಮನು ಕೊಡುವ ವರಗಳಲ್ಲಿ ಒಂದಾಗಿದೆ – 1 ಕೊರಿಂಥ 14:19-31.

*“ನಿಮ್ಮ ಮೇಲೆ ಹಸ್ತಗಳನ್ನಿಟ್ಟಾಗ”*– ಎಫೆಸದ ಸಭೆಯಲ್ಲಿ ಹಿರಿಯರೆಲ್ಲರೂ ಕೂಡಿ ಬಂದು ತಿಮೊಥೆಯನನ್ನು ಸೇವೆಗಾಗಿ ಪ್ರತಿಷ್ಠಿಸಿದಾಗ ಇದು ಸಂಭವಿಸಿತು. ಅಪೊ 13:3 ರೊಂದಿಗೆ ಹೋಲಿಸಿ ನೋಡಿರಿ. ದೇವರು ತನ್ನ ಸೇವಕರ ಮೇಲೆ ಯಾರೂ ಹಸ್ತಗಳನ್ನಿಡದೆ ಹೋದರೆ ಅವರಿಗೆ ಆತ್ಮೀಕ ವರಗಳು ಹಾಗೂ ಸಾಮರ್ಥ್ಯಗಳನ್ನು ಕೊಡಲು ಶಕ್ತನಾಗಿದ್ದಾನೆ. ಆದರೆ ಆದಿ ಸಭೆಯಲ್ಲಿ ಹಸ್ತಗಳನ್ನಿಡುವ ಅಭ್ಯಾಸವು ಜನರನ್ನು ವಿಶೇಷವಾದ ಸೇವೆಗಾಗಿ ನೇಮಿಸುವದರಲ್ಲಿ ದೇವರು ಹಾಗೂ ವಿಶ್ವಾಸಿಗಳ ನಡುವೆಯಿದ್ದ ಐಕ್ಯತೆ ಹಾಗೂ ಸಾಮರಸ್ಯಕ್ಕೆ ಸೂಚನೆಯಾಗಿದೆ. **15**

**4:15** *“ಎಲ್ಲರಿಗೂ”*– ಪೂರ್ಣಹೃದಯದಿಂದ ಸೇವೆ ಮಾಡದೆ ಹೋದರೆ ಅದು ಎಂದಿಗೂ ದೇವರಿಗೆ ಮೆಚ್ಚಿಕೆಯಾಗಿರಲಾರದು. ಪೌಲನಿಗಿದ್ದ ಬಯಕೆಯೇ ಯೇಸು ಕ್ರಿಸ್ತನ ಪ್ರತಿಯೊಬ್ಬ ಸೇವಕನಿಗೆ ಬಲವಾಗಿ ಇರಬೇಕು – ಅಪೊ 20:24; ಕೊಲೊ 1:29. **16**

**4:16** ಯೇಸು ಕ್ರಿಸ್ತನ ಪ್ರತಿಯೊಬ್ಬ ಸೇವಕನು ತಾನು ಹೇಗೆ ಜೀವಿಸುತ್ತಾ ಇದ್ದಾನೆ ಮತ್ತು ಏನನ್ನು ಕಲಿಸುತ್ತಾ ಇದ್ದಾನೆ ಎಂಬ ವಿಷಯದಲ್ಲಿ ಅತ್ಯಂತ ಎಚ್ಚರಿಕೆಯುಳ್ಳವನಾಗಿರಬೇಕು. ಒಂದುವೇಳೆ ನಮ್ಮ ಬೋಧನೆಯು ಸರಿಯಾಗಿಲ್ಲವೆಂದರೆ ನಾವು ಪರಿಶುದ್ಧರಾಗಿ ಜೀವಿಸಲು ಆಗುವದಿಲ್ಲ ಮತ್ತು ನಮ್ಮ ಜೀವಿತಗಳು ಅಶುದ್ಧವಾಗಿದ್ದರೆ ಸರಿಯಾದ ಸಿದ್ಧಾಂತಗಳನ್ನು

ಕಲಿಸಲು ಆಗುವದಿಲ್ಲ.

*"ನಿನ್ನ ಉಪದೇಶ ಕೇಳುವವರನ್ನೂ ರಕ್ಷಿಸುವಿ"*– ಯೆಹೆಜ್ಕೇಲ 33:6,9 ರೊಂದಿಗೆ ಹೋಲಿಸಿ ನೋಡಿರಿ. ದೇವರು ಮಾತ್ರವೇ ರಕ್ಷಕನಾಗಿದ್ದಾನೆ (1:1). ತಿಮೊಥೆಯನು ಈಗಾಗಲೇ ರಕ್ಷಣೆ ಹೊಂದಿದ್ದಾನೆ, ಈಗಾಗಲೇ ಪುನರ್ಜನ್ಮ ಹೊಂದಿದ್ದಾನೆ ಮತ್ತು ನಿತ್ಯಜೀವವನ್ನು ಪಡೆದಿದ್ದಾನೆ (1:2) ಎಂಬ ದೃಢತೆ ಪೌಲನಿಗಿತ್ತು. ದೇವಸೇವಕರು ತಮ್ಮ ಉಪದೇಶ ಹಾಗೂ ಜೀವನ ಶೈಲಿಯ ವಿಧಾನದ ಮೂಲಕ ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಆಗುವದಿಲ್ಲ (ಎಫೆ 2:8-9). ಆದರೆ ದೇವರ ಕೃಪೆಯಿಂದ ಅವರು ನಂಬಿಕೆಯಲ್ಲಿ ಮುಂದುವರೆಯಬಹುದು ಮತ್ತು ಭಯದಿಂದ ನಡುಗುವವರಾಗಿ ತಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಬಹುದು (ಫಿಲಿಪ್ಪಿ 2:1-2). ಇದು ಬಹಳ ಅವಶ್ಯವಾಗಿದೆ (ಕೊಲೊ 1:23; ಇಬ್ರಿ 3:6,14; 6:12). ಮತ್ತು ತಮ್ಮನ್ನು ಹಾಗೂ ತಮ್ಮ ಬೋಧನೆಯನ್ನು ಗಮನಿಸುವ ಮೂಲಕ ಅವರು ತಮ್ಮನ್ನೇ ದೇವರ ಘೋರವಾದ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಹುದು. "ರಕ್ಷಣೆ" ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದವನ್ನು ಹೊಸ ಒಡಂಬಡಿಕೆಯಲ್ಲಿ ಪಾಪದಿಂದ ದೊರೆಯುವ ರಕ್ಷಣೆಯನ್ನು ಸೂಚಿಸಲು ಉಪಯೋಗಿಸಲಾಗಿದೆ, ಹಾಗೆಯೇ ವಿವಿಧ ರೀತಿಯ ಅಪಾಯಗಳು ಮತ್ತು ತೊಂದರೆಗಳಿಂದ ರಕ್ಷಿಸಿಕೊಳ್ಳುವದನ್ನು ಇದು ಸೂಚಿಸುತ್ತದೆ.

*"ನಿನ್ನ ಉಪದೇಶ ಕೇಳುವವರನ್ನೂ ರಕ್ಷಿಸುವಿ"*– ಯಾಕೋಬ 5:19-20. ಇದರ ಅರ್ಥ ದೇವರ ನಂಬಿಗಸ್ತನಾದ ಸೇವಕನು ದೇವರ ಹಸ್ತಗಳಲ್ಲಿ ಸಾಧನವಾಗಿರುವನು, ಅಂದರೆ ಇತರರನ್ನು ರಕ್ಷಣೆ ಮಾರ್ಗಕ್ಕೆ ನಡೆಸಲು ಅಥವಾ ನಂಬಿಕೆಯಲ್ಲಿ ಮುಂದುವರೆಯಲು ಅವರನ್ನು ಪ್ರೋತ್ಸಾಹಪಡಿಸಲು ದೇವರು ಅವರನ್ನು ಉಪಯೋಗಿಸುವನು. ಇದಕ್ಕಿಂತಲೂ ಹೆಚ್ಚು ದೊಡ್ಡದು ಅಥವಾ ಆಶೀರ್ವಾದದಾಯಕವಾದ ಕೆಲಸ ಮಾನವರಿಗೆ ಯಾವುದಾದರೂ ಇದೆಯೇ?

# 5 1-2

**5:1-2** ಸಭೆಯ ನಾಯಕನಾಗಿ ದೇವರಿಂದ ನೇಮಕಗೊಂಡಿರುವ ಸಭಾಪಾಲಕನು ಅಧಿಕಾರವುಳ್ಳವನಾಗಿರುತ್ತಾನೆ, ಆದರೆ ಅವನು ಸಭೆಯನ್ನು ತನ್ನ ಸ್ವಂತ ಚಿಕ್ಕ ರಾಜ್ಯವೆಂದು ಭಾವಿಸಬಾರದು ಮತ್ತು ಸರ್ವಾಧಿಕಾರಿಯಾಗಿ ಆಳ್ವಿಕೆ ಮಾಡಲು ಪ್ರಯತ್ನಿಸಬಾರದು.

ಸಭೆಯನ್ನು ಅವನು ಮನೆಯಂತೆ, ಕುಟುಂಬವಂತೆ ನೋಡಿಕೊಳ್ಳಬೇಕು (3:15) ಮತ್ತು ಅದರಂತೆ ನಡೆದುಕೊಳ್ಳಬೇಕು (1 ಪೇತ್ರ 5:1-3). 3

**5:3** ಸಭೆಯಲ್ಲಿರುವ ಬಡವರನ್ನು ನೋಡಿಕೊಳ್ಳುವದು ಸಭೆ ಮತ್ತು ಅದರ ಸಭಾಪಾಲಕನ ಜವಾಬ್ದಾರಿಕೆಯಾಗಿದೆ. ಬಡವರು ಒಂದುವೇಳೆ ವಿಧವೆಯರಾಗಿದ್ದು ಅವರಿಗೆ ಯಾವುದೇ ಆದಾಯವಿಲ್ಲದೆ ಇದ್ದರೆ ಮತ್ತು ಕೆಲಸ ಮಾಡಲು ಅವರಿಂದ ಆಗದೆ ಹೋದರೆ ಇದು ವಿಶೇಷವಾಗಿ ಸತ್ಯವಾಗಿರುತ್ತದೆ. 4

**5:4** ಮಕ್ಕಳಿಗೆ ಮತ್ತು ಮೊಮ್ಮಕ್ಕಳಿಗೆ ಅವಶ್ಯಕತೆಯಲ್ಲಿರುವ ತಂದೆತಾಯಿಗಳು ಹಾಗೂ ಅಜ್ಜಿತಾತಂದಿರ ವಿಷಯದಲ್ಲಿರುವ ಜವಾಬ್ದಾರಿಕೆಯನ್ನು ಗಮನಿಸಿರಿ.

"*ಭಕ್ತಿ ತೋರಿಸುವದು*"– ಅಂದರೆ ದೇವರಿಗೆ ಮೆಚ್ಚಿಕೆಯಾಗುವ ಹಾಗೆ ಮನೆಯಲ್ಲಿ ಜೀವಿಸುವ ಮೂಲಕ ಅವರು ದೇವರ ಮೇಲೆ ತಮಗಿರುವ ಭಕ್ತಿಯನ್ನು ತೋರಿಸಬೇಕು. ಇದು ಪ್ರತಿಯೊಬ್ಬ ವಿಶ್ವಾಸಿಯ ವಿಷಯದಲ್ಲಿಯೂ ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ! ನಾವು ಸತ್ಯವನ್ನು ನಂಬುವದು ಮಾತ್ರವಲ್ಲ, ಅದನ್ನು ನಮಗೆ ಹತ್ತಿರವಾಗಿರುವವರೊಂದಿಗೂ ಅಭ್ಯಾಸ ಮಾಡಬೇಕು. ದೇವರು ಹೇಳಿರುವದನ್ನು ನಾವು ತಿಳಿದುಕೊಂಡರೆ ಸಾಲದು, ಆತನು ಹೇಳಿರುವ ಹಾಗೆಯೇ ನಾವು ನಡೆದುಕೊಳ್ಳಬೇಕು. ಇದೊಂದೇ ದೇವರನ್ನು ಮೆಚ್ಚಿಸಲು ನಮ್ಮೆದುರಿಗುವ ಮಾರ್ಗವಾಗಿದೆ. ಒಂದುವೇಳೆ ಮಕ್ಕಳು ಅಥವಾ ಮೊಮ್ಮಕ್ಕಳು ವಿಧವೆಯಾಗಿರುವ ತಮ್ಮ ತಾಯಿ ಅಥವಾ ಅಜ್ಜಿ ಅಗತ್ಯತೆಯಲ್ಲಿರುವಾಗ ಅವರಿಗೆ ಸಹಾಯ ಮಾಡಲಿಲ್ಲವೆಂದರೆ, ಅವರು ದೇವರಿಗೆ ವಿರುದ್ಧವಾಗಿ ಪಾಪ ಮಾಡುವವರಾಗಿದ್ದಾರೆ.

"*ಪ್ರತ್ಯುಪಕಾರ*"– ನಾವು ನಮ್ಮ ತಂದೆತಾಯಿಗಳಿಗೆ ಏನೂ ಕೊಡಬೇಕಾಗಿಲ್ಲ ಎಂದು ಮಕ್ಕಳು ಅಂದುಕೊಳ್ಳಬಹುದು, ಆದರೆ ಈ ವಿಷಯದಲ್ಲಿ ದೇವರ ದೃಷ್ಟಿಕೋನವೇ ಬೇರೆಯಾಗಿದೆ. 5

**5:5** ಪೌಲನು ಕ್ರೈಸ್ತ ವಿಧವೆಯರ ಬಗ್ಗೆ ಮಾತನಾಡುತ್ತಾ ಇದ್ದಾನೆ. ಒಂದುವೇಳೆ ಅವರು ಅವಶ್ಯಕತೆಯಲ್ಲಿದ್ದು ಅವರಿಗೆ ಸಹಾಯ ಮಾಡಲು ಯಾರೂ ಇಲ್ಲವೆಂದರೆ, ಸಭೆ ಅಥವಾ ಸಭೆಯಲ್ಲಿರುವ ಸದಸ್ಯರು ಸಹಾಯ ಮಾಡಬೇಕು. ಅವರ ಅವಶ್ಯಕತೆಗಳನ್ನು ಪೂರೈಸಲು ಈ ಏರ್ಪಾಡು ಮಾಡಿದ್ದಾನೆ. 6

**5:6** "*ಬದುಕಿರುವಾಗಲೂ ಸತ್ತವಳೇ*"– ಇದರ ಅರ್ಥ ಅಂಥ ವ್ಯಕ್ತಿ ದೇವರ ಜೀವದಿಂದ

ದೂರವಾಗಿರುತ್ತಾನೆ ಮತ್ತು ಸತ್ತುಹೋಗುತ್ತಾನೆ (ಎಫೆ 2:1; 4:18). ಇದು ಭೋಗಗಳಿಗಾಗಿ ಜೀವಿಸುವ ವಿಧವೆಯರ ವಿಷಯದಲ್ಲಿ ಮಾತ್ರವಲ್ಲ ಬದಲಾಗಿ ಯಾರೇ ಹೀಗೆ ಜೀವಿಸಿದರೂ ಅವರ ವಿಷಯದಲ್ಲಿ ಸತ್ಯವಾಗಿದೆ. ಯೇಸು ಕ್ರಿಸ್ತನಿಲ್ಲದೆ ಇರುವವನು ಸತ್ತವನಾಗಿದ್ದಾನೆ, ಅವನು ಅಥವಾ ಹೇಗೆ ಜೀವನ ಮಾಡುತ್ತಾ ಇದ್ದರೂ ಅವರು ಸತ್ತವರಿಗೆ ಸಮಾನರಾಗಿರುತ್ತಾರೆ. ಕೆಲವು ದೇವರಿಗಾಗಿ ಜೀವಿಸದೆ ಭೋಗಗಳಿಗಾಗಿ ಜೀವಿಸುವವರು ನಾವು ಸಜೀವರಾಗಿದ್ದೇವೆ ಎಂಬದಾಗಿ ಅಂದುಕೊಳ್ಳುತ್ತಾರೆ. ಯಾಕೆ? ಯೆರೆ 17:9 ನೋಡಿರಿ. **8**

**5:8** *"ನಂಬಿಕೆ"*– ಕ್ರೈಸ್ತೀಯ ವಿಶ್ವಾಸ ಮತ್ತು ಅಭ್ಯಾಸಗಳ ಸಾರಾಂಶವನ್ನು ಸೂಚಿಸಲು ಪೌಲನು ಈ ಪದವನ್ನು ಇಲ್ಲಿ ಉಪಯೋಗಿಸಿದ್ದಾನೆ. ಇದರ ಪ್ರಮುಖ ಭಾಗ ಪ್ರೀತಿ. ಒಂದುವೇಳೆ ಯಾವನಾದರೂ ಪ್ರೀತಿಯನ್ನು ಅಭ್ಯಾಸ ಮಾಡದೆ ಹೋದರೆ ಅವನು ನಂಬಿಕೆಯನ್ನು ತಿರಸ್ಕರಿಸುವವನಾಗಿದ್ದಾನೆ (1 ಯೋಹಾನ 3:16-18; 4:7-8). ಸಂಪೂರ್ಣವಾಗಿ ಯೇಸು ಕ್ರಿಸ್ತನನ್ನು ನಿರಾಕರಿಸುವಂಥ ಅನೇಕ ಅವಿಶ್ವಾಸಿಗಳೇ ಇಂದು ಅವಶ್ಯಕತೆಯಲ್ಲಿರುವ ಸಂಬಂಧಿಕರನ್ನು ನೋಡಿಕೊಳ್ಳುವವರಾಗಿದ್ದಾರೆ. ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಈ ರೀತಿ ಯೋಚನೆ ಮಾಡಲು ಆಗುವದಿಲ್ಲವೇ? **9**

**5:9** *"ಸಂಖ್ಯೆ" (ಅರವತ್ತು) – ಅಥವಾ "ಪಟ್ಟಿ"*–ವಿಧವೆಯರದ್ದು. ಅರವತ್ತು ಕೆಳ ವಯಸ್ಸಿನ ವಿಧವೆಯರು ಅವಶ್ಯಕತೆಯಲ್ಲಿರುವದಾದರೆ ಅವರಿಗೆ ಸಹಾಯ ಮಾಡಬಾರದು ಅಥವಾ ಸಹಾಯದ ಅವಶ್ಯಕತೆಯಲ್ಲಿ ವಿಧವೆಯಿರುವದಾದರೆ ಈ ವಾಕ್ಯಗಳಲ್ಲಿ ಹೇಳಿರುವ ಷರತ್ತುಗಳನ್ನು ಪೂರೈಸಿದರೆ ಮಾತ್ರ ಆಕೆಗೆ ಸಹಾಯ ಮಾಡಬೇಕೆಂದು ಪೌಲನು ಹೇಳುತ್ತಾ ಇಲ್ಲ. ಹೀಗಿರುವದರಿಂದ ಪಟ್ಟಿಯಲ್ಲಿರುವ ವಿಧವೆಯರನ್ನು ಯಾವುದಾದರೊಂದು ರೀತಿಯಲ್ಲಿ ಸಭೆಯ ಸೇವೆಗಾಗಿ ಸಭೆಯೇ ಅವರನ್ನು ನೇಮಿಸಿದೆ ಎಂಬದನ್ನು ತಿಳಿದುಕೊಳ್ಳಬಹುದು. ಅಂಥ ವಿಧವೆಯರಿಗೆ ಕೆಲವು ಷರತ್ತುಗಳು ಅನ್ವಯಿಸುತ್ತವೆ ಮತ್ತು ಸಭೆಯಲ್ಲಿರುವ ಸಭಾಧ್ಯಕ್ಷರು ಹಾಗೂ ಸಭಾಸೇವಕರಿಗೆ ಇರುವ ಹಾಗೆ ಕೆಲವು ಅರ್ಹತೆ ಇರಬೇಕಾಗುತ್ತದೆ (3:1-12). **10**

**5:10** *"ಅತಿಥಿ ಸತ್ಕಾರ ಮಾಡುವವಳು"*– ರೋಮಾ 12:13.

*"ದೇವಜನರಿಗೆ ಉಪಚಾರ ಮಾಡುವವಳು"*– ಯೋಹಾನ 13:5. **11-12**

**5:11-12** ಪಟ್ಟಿಯಲ್ಲಿರುವ ವಿಧವೆಯರೆಲ್ಲರೂ ಯೇಸು ಕ್ರಿಸ್ತನಿಗೆ ಸಮರ್ಪಣೆಯುಳ್ಳವರಾಗಿರಬೇಕು ಮತ್ತು ಸೇವೆಗಾಗಿ ಸಭೆಯಿಂದ ಪ್ರತಿಷ್ಠಿತರಾಗಬೇಕು.

ಎರಡನೆ ಮದುವೆ ಮಾಡಿಕೊಳ್ಳುವದು ತಪ್ಪಲ್ಲ ಬದಲಾಗಿ ಯೇಸು ಕ್ರಿಸ್ತನ ಸೇವೆಗೆ ಸಮರ್ಪಣೆ ಮಾಡಿಕೊಂಡಿರುವ ವಿಧವೆಯರು ಎರಡನೇ ಮದುವೆ ಮಾಡಿಕೊಂಡರೆ ಸಂಪೂರ್ಣವಾಗಿ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಅವರಿಂದ ಆಗುವದಿಲ್ಲ ಮತ್ತು ಅವರು ಸೇವೆಯನ್ನೇ ತ್ಯಜಿಸುವ ಪರಿಸ್ಥಿತಿ ಎದುರಾಗುತ್ತದೆ. ನಾವು ಮಾಡುತ್ತೇವೆಂದು ಪ್ರಮಾಣ ಮಾಡಿರುವ ಯೇಸು ಕ್ರಿಸ್ತನ ಕಾರ್ಯಗಳಿಂದ ಹಿಂದೆ ಸರಿಯುವದು ಸಣ್ಣ ಪಾಪವೇನೂ ಅಲ್ಲ. ಈ ವಿಧದಲ್ಲಿ ದೇವರ ನ್ಯಾಯತೀರ್ಪು ವಿಧವೆಯರ ಮೇಲೆ ಬರುತ್ತದೆ. 13

**5:13** ಈ ಕಾರಣದಿಂದಲೇ ಯೌವನಸ್ಥ ವಿಧವೆಯರನ್ನು (ವ 14) ಸಭೆಯಲ್ಲಿ ಸೇವೆಗೆ ನೇಮಕ ಮಾಡಬಾರದು. 14

**5:14** ಪೌಲನು ಹೇಳುವದೇನೆಂದರೆ ಯೌವನಸ್ಥರ ವಿಧವೆಯರು ಸಭೆಯ ಸೇವೆಗೆ ತಮ್ಮನ್ನು ಸಮರ್ಪಿಸಿಕೊಳ್ಳುವದು, ಸೇವೆ ಮಾಡುವದಾಗಿ ಪ್ರಮಾಣ ಮಾಡುವದು ನಂತರ ತಮ್ಮ ಪ್ರಮಾಣವನ್ನು ಮುರಿಯುವದು, ಸೇವೆಯನ್ನು ಬಿಟ್ಟು ಮದುವೆ ಮಾಡಿಕೊಳ್ಳುವದು, ಇಂಥ ಎಲ್ಲಾ ಪರಿಸ್ಥಿತಿಗಳಿಗೆ ಒಳಗಾಗುವ ಬದಲು ಅವರು ಮದುವೆ ಮಾಡಿಕೊಳ್ಳುವದೇ ಒಳ್ಳೇಯದು.

*"ವಿರೋಧಿಗಳು"*– ಯೇಸು ಕ್ರಿಸ್ತನು ಮತ್ತು ಆತನ ಸಭೆಯನ್ನು ವಿರೋಧಿಸುವವರು. ಈ ರೀತಿಯ ಜನರು ಕ್ರೈಸ್ತರಲ್ಲಿ ತಪ್ಪುಗಳನ್ನು ಕಂಡುಹಿಡಿಯಲು ಮತ್ತು ಆರೋಪಗಳನ್ನು ಮಾಡಲು ಯಾವಾಗಲೂ ಅವಕಾಶಗಳನ್ನು ಹುಡುಕುತ್ತಾ ಇರುತ್ತಾರೆ. ಅವರಿಗೆ ಅವಕಾಶಗಳನ್ನು ಕೊಡದಂತೆ ಕ್ರೈಸ್ತರು ಎಚ್ಚರಿಕೆಯುಳ್ಳವರಾಗಿರಬೇಕು. 15

**5:15** ಕೆಲವು ವಿಧವೆಯರು ಸಭೆಯಲ್ಲಿ ಯಾವುದಾದರು ರೀತಿಯಲ್ಲಿ ಸೇವೆ ಮಾಡಲು ಪ್ರಮಾಣ ಮಾಡಿದ್ದರು ಎಂಬದು ಸ್ಪಷ್ಟವಾಗಿ ತೋರುತ್ತದೆ, ನಂತರ ಅವರು ತಮ್ಮ ಶಾರೀರಿಕ ಬಲಹೀನತೆಗಳಿಗೆ ಒಳಗಾಗಿ (ವ 11) ಕ್ರಿಸ್ತನ ಸೇವೆಯನ್ನು ತೋರೆದಿರಬಹುದು.

*"ಸೈತಾನನನ್ನು ಹಿಂಬಾಲಿಸಿದ್ದಾರೆ"*– ದೇವರ ಚಿತ್ತ ನೆರವೇರಿಸುವದನ್ನು ತಿರಸ್ಕರಿಸಿ ತನ್ನ ಶಾರೀರಿಕ ಬಲಹೀನತೆಗಳಿಗೆ ಒಳಗಾಗುವ ಸಲುವಾಗಿ ಅವರು ಸೈತಾನನನ್ನು ಹಿಂಬಾಲಿಸುವವರಾಗಿದ್ದರು. ಈ ಲೋಕದ ಪಾಪಗಳು ಮತ್ತು ಆಸೆಭೋಗಗಳನ್ನು ಹಿಂಬಾಲಿಸುವ ನಿಮಿತ್ತ ಅವರು ಘೋರವಾದ ವೈರಿಯನ್ನು ಹಿಂಬಾಲಿಸುವವರಾಗಿದ್ದಾರೆ. 1 ಪೂರ್ವ 21:1; ಮತ್ತಾಯ 4:1-10 ರಲ್ಲಿ ಸೈತಾನನ ಕುರಿತಾದ ನೋಟ್ಸ್ ನೋಡಿರಿ. 16

**5:16** ತಮ್ಮ ಸಂಬಂಧಿಕರ ನಡುವೆಯಿರುವ ವಿಧವೆಯರಿಗೆ ಸಹಾಯ ಮಾಡಲು ಬಯಸುವ ಸ್ತ್ರೀಯರು ಉಳಿದವರ ಹಾಗೆ ಈ ಜವಾಬ್ದಾರಿಕೆಯನ್ನು ತಾವೂ ತೆಗೆದುಕೊಳ್ಳಬೇಕು. ವಚನಗಳು 4 ಮತ್ತು 8 ರೊಂದಿಗೆ ಹೋಲಿಸಿ ನೋಡಿರಿ. **17**

**5:17** *"ಇಮ್ಮಡಿಯಾದ ಮಾನ"*– ಪೌಲನ ಮಾತುಗಳ ಅರ್ಥ ಆರ್ಥಿಕ ಸಹಾಯ ಹಾಗೆಯೇ ಇತರೆ ರೀತಿಯ ಮಾನ ಎಂಬದು ಮುಂದಿನ ವಾಕ್ಯದಿಂದ ಗೊತ್ತಾಗುತ್ತದೆ. **18**

- **5:18** ಧರ್ಮೋ 25:4; ಲೂಕ 10:7; 1 ಕೊರಿಂಥ 9:9-12. **19**

**5:19** ಕೆಲವೊಮ್ಮೆ ಅಮಾಯಕನಾಗಿರುವ ಯೇಸು ಕ್ರಿಸ್ತನ ಸೇವಕನ ಮೇಲೆ ಯಾವುದಾದರು ರೀತಿಯ ತಪ್ಪಾದ ಆರೋಪಗಳನ್ನು ಮಾಡುವವರಾಗಿರುತ್ತಾರೆ. ಒಂದುವೇಳೆ ಇತರರು ಅಂಥ ಆರೋಪಗಳನ್ನು ನಂಬುವದಾದರೆ ಆ ವ್ಯಕ್ತಿಯ ಸೇವೆಯ ಮೇಲೆ ಘೋರವಾದ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ಪೌಲನು ಇಲ್ಲಿ ಯುಕ್ತವಾದ ಸೂಚನೆಗಳನ್ನು ಕೊಟ್ಟಿದ್ದಾನೆ.

*"ಇಬ್ಬರು ಅಥವಾ ಮೂವರು"*– ಧರ್ಮೋ 19:15; ಮತ್ತಾಯ 18:16; 2 ಕೊರಿಂಥ 13:1. **20**

**5:20** ಸಭೆಯ ಪರಿಶುದ್ಧತೆ ಮತ್ತು ಶುದ್ಧತ್ವವನ್ನು ಸಂರಕ್ಷಿಸುವದು ಅವಶ್ಯವಾದ ಕ್ರಮಶಿಕ್ಷಣವಾಗಿದೆ. ಒಂದುವೇಳೆ ಗೊತ್ತಿರುವ ಪಾಪವನ್ನು ಸಭೆಯಲ್ಲಿ ತಡೆಯದೆ ಹೋದರೆ ಮತ್ತು ಸಾರ್ವಜನಿಕವಾಗಿ ಗದರಿಸದೆ ಹೋದರೆ ಆಗ ಆ ಪಾಪವೇ ಸಭೆಯನ್ನು ಹಾಳುಮಾಡುವ ಸಾಧ್ಯತೆಯೂ ಇದೆ. ಅಪೊ 5:1-11; 1 ಕೊರಿಂಥ 5:1-5,13; ಮತ್ತಾಯ 18:15-17. ದೇವಜನರು ಪಾಪದ ವಿಷಯದಲ್ಲಿ ಹೆದರಿಕೊಳ್ಳಬೇಕೆಂದರೆ ಅವರ ಪಾಪಗಳನ್ನು ಬಹಿರಂಗವಾಗಿ ಪ್ರಕಟಿಸಬೇಕು, ಇದು ಪರಿಣಾಮಕಾರಿಯಾದ ಮಾರ್ಗಗಳಲ್ಲಿ ಒಂದಾಗಿದೆ. ಆದರೆ ಇಂಥ ವಿಷಯಗಳಲ್ಲಿ ಎಚ್ಚರವಾಗಿ ನಡೆದುಕೊಳ್ಳಬೇಕು ಮತ್ತು ದೇವರ ಪ್ರೀತಿಯ ಪ್ರಕಾರ ಪಾಪ ಮಾಡಿರುವವರನ್ನು ಮರೆಯಬಾರದು. **21**

**5:21** ಪೌಲನು ಇಲ್ಲಿ ಬಲವಾಗಿ, ಪ್ರಾಮುಖ್ಯವಾಗಿ ಬರೆದಿರುವದನ್ನು ನೋಡಿರಿ. ಪಕ್ಷಪಾತ ಮಾಡುವದು ಸಭೆಗಳಲ್ಲಿ ಸಾಮಾನ್ಯವಾದ ವಿಷಯ ಎಂಬದು ಅವನಿಗೆ ಗೊತ್ತಿತ್ತು. ಬಹುತೇಕ ಸಭೆಯ ನಾಯಕರು ತಮ್ಮ ಸಂಬಂಧಿಕರು ಅಥವಾ ಸ್ನೇಹಿತರು ಪಾಪ ಮಾಡುತ್ತಾ ಇದ್ದರೆ ಅವರನ್ನು ಸಮರ್ಥಿಸಿಕೊಳ್ಳುತ್ತಾರೆ ಮತ್ತು ಅದನ್ನು ಬಹಿರಂಗಪಡಿಸಿ, ಅವರನ್ನು ಗದರಿಸುವ ಬದಲು ಮುಚ್ಚಿಡಲು ಪ್ರಯತ್ನಿಸುತ್ತಾರೆ. ಆದರೆ ಒಂದುವೇಳೆ ಬೇರೆಯವರು ಪಾಪ

ಮಾಡಿದರೆ ಅವರೊಂದಿಗೆ ಬಹಳ ಘೋರವಾಗಿ ನಡೆದುಕೊಳ್ಳುತ್ತಾರೆ. ಇದು ಬಹಳ ದೊಡ್ಡ ತಪ್ಪು ಮತ್ತು ಸಭೆಗೆ ಅಪಾರವಾದ ಹಾನಿಯನ್ನು ಮಾಡುತ್ತದೆ. ಯೇಸು ಕ್ರಿಸ್ತನ ಪ್ರತಿಯೊಬ್ಬ ಸೇವಕನು ಪೂರ್ಣಹೃದಯದಿಂದ ಇಲ್ಲಿ ಪೌಲನ ಸೂಚನೆಗಳಿಗೆ ವಿಧೇಯರಾಗಬೇಕು. **22**

**5:22** *"ಹಸ್ತಗಳು"*– 4:14; 2 ತಿಮೊ 1:6. ಬಹುಶಃ ಪೌಲನು ಹಿರಿಯರು ಮತ್ತು ಸಭಾಸೇವಕರ ನೇಮಕಾತಿಯ ಬಗ್ಗೆ ಮಾತನಾಡುತ್ತಾ ಇದ್ದಾನೆ. ಈ ಸ್ಥಾನಗಳಿಗೆ ತಾವು ಅರ್ಹನೆಂದು ನಿರೂಪಿಸುವ ಮೊದಲೇ ಅಂಥವರನ್ನು ನೇಮಕ ಮಾಡುವದಾದರೆ ನಂತರದಲ್ಲಿ ಅವರಿಂದ ಸಭೆಗೆ ದೊಡ್ಡ ತೊಂದರೆಯಾಗುತ್ತದೆ. 3:10 ರೊಂದಿಗೆ ಹೋಲಿಸಿ ನೋಡಿರಿ. ಒಂದುವೇಳೆ ಸಭೆಯ ನಾಯಕರು ಪಾಪದಲ್ಲಿ ಜೀವಿಸುವವರನ್ನು ಹಿರಿಯರು ಮತ್ತು ಸಭಾಸೇವಕರನ್ನಾಗಿ ನೇಮಕ ಮಾಡಿದರೆ, ಮುಂದಾಗುವ ಪರಿಣಾಮಗಳಿಗೆ ಆ ನಾಯಕರೇ ಜವಾಬ್ದಾರರಾಗಿರುತ್ತಾರೆ. ಸಭೆಯ ನಾಯಕರೂ ಪರಿಶುದ್ಧ ಜೀವನ ನಡೆಸುವವರಾಗಿರಬೇಕು ಮತ್ತು ಪರಿಶುದ್ಧ ಜೀವನ ನಡೆಸುವವರನ್ನು ಮಾತ್ರವೇ ಹಿರಿಯರು ಹಾಗೂ ಸಭಾಸೇವಕರನ್ನಾಗಿ ನೇಮಕ ಮಾಡಬೇಕು. **23**

**5:23** *"ಆಗಾಗ್ಗ ಉಂಟಾಗುವ ಅಸ್ವಸ್ಥತೆ"*– ಪೌಲನಿಗೆ ಸ್ವಸ್ಥಪಡಿಸುವ ವರವಿತ್ತು (ಅಪೊ 28:8-9) ಆದರೆ ಅವನಿಂದಾಗಲಿ ಅಥವಾ ಬೇರೆಯವರಿಂದಾಗಲಿ ತಿಮೊಥೆಯನನ್ನು ಸಂಪೂರ್ಣವಾಗಿ ಗುಣಪಡಿಸಲು ಆಗಲಿಲ್ಲ. ನಾವು ವಿಶ್ವಾಸಿಗಳ ಅಸ್ವಸ್ಥತೆ ಮತ್ತು ಆರೋಗ್ಯದ ಬಗ್ಗೆ ಅಧ್ಯಯನ ಮಾಡುವಾಗ ಇದು ಬಹಳ ಪ್ರಾಮುಖ್ಯವಾದ ವಿಷಯವಾಗಿದೆ. 2 ತಿಮೊ 4:20; ಫಿಲಿಪ್ಪಿ 2:27; 2 ಕೊರಿಂಥ 12:7-10 ರೊಂದಿಗೆ ಹೋಲಿಸಿ ನೋಡಿರಿ. ತಿಮೊಥೆಯನು ಅಶುದ್ಧವಾದ ನೀರು ಕುಡಿದಿದ್ದರಿಂದ ಅವನಿಗೆ ತೊಂದರೆಯಾಗಿರಬಹುದು. ಅಂಥ ಸಂದರ್ಭದಲ್ಲಿ ಅದಕ್ಕೆ ಸ್ವಲ್ಪ ದ್ರಾಕ್ಷಾರಸ ಬೆರೆಸಿ ಕುಡಿಯುವದು ಪ್ರಯೋಜನಕರವಾಗಿರುತ್ತದೆ. ಕುಡಿಯುವ ನೀರಿಗೆ ಸ್ವಲ್ಪ ದ್ರಾಕ್ಷಾರಸ ಬೆರೆಸುವದು ಆಗಿನ ದಿನಗಳಲ್ಲಿ ಸಾಮಾನ್ಯವಾಗಿತ್ತು. ಇಲ್ಲಿ "ಸ್ವಲ್ಪ" –ಎಂಬದಾಗಿ ಬರೆದಿರುವ ಪದವನ್ನು ಗಮನಿಸಿರಿ. 3:3,8; ಆದಿ 9:21; ಜ್ಞಾನೋ 20:1; 23:30-31. **24-25**

**5:24-25** ಕೆಲವೊಮ್ಮೆ ಒಬ್ಬ ವ್ಯಕ್ತಿಯ ಒಳ್ಳೆಯ ಕಾರ್ಯಗಳು ಅಥವಾ ಕೆಟ್ಟ ಕಾರ್ಯಗಳು ಸಾಮಾನ್ಯ ಜನರಿಗೆ ಖಂಡಿತವಾಗಿರುತ್ತವೆ. ಮಾನವರು ಕೆಲವು ಸಮಯದ ತನಕ ತಮ್ಮ ರಹಸ್ಯವಾದ ಪಾಪಗಳನ್ನು ಅಥವಾ ಕಾರ್ಯಗಳು ಮುಚ್ಚಿಡಲು ಸಾಧ್ಯವಾಗುತ್ತದೆ (ಕೀರ್ತನೆ 90:8; ಪ್ರಸಂಗಿ 12:14; ಮತ್ತಾಯ 6:1-4). ಈ ಕಾರಣದಿಂದಲೇ ಸಭೆಯ ನಾಯಕರು ಹಿರಿಯರನ್ನು ಮತ್ತು ಸಭಾಸೇವಕರು ನೇಮಕ ಮಾಡುವದರಲ್ಲಿ ಆತುರಪಡಬಾರದು.

ಕ್ರಮೇಣವಾಗಿ ಜನರು ಮಾಡುವ ಕಾರ್ಯಗಳೆಲ್ಲವೂ ಪ್ರಕಟವಾಗುವವು – ಮತ್ತಾಯ 10:26; ಲೂಕ 8:17; 12:2-3; ರೋಮಾ 2:16; 1 ಕೊರಿಂಥ 4:5.

# 6 1

- **6:1** ಎಫೆ 6:5-6 (ನೋಟ್ಸ್); ಕೊಲೊ 3:2; ತೀತ 2:9; 1 ಪೇತ್ರ 2:18.

*"ನಿಂದೆ ಉಂಟಾದೀತು"*– ಒಂದುವೇಳೆ ಯೇಸು ಕ್ರಿಸ್ತನ ಸೇವಕರು ಅಥವಾ ದಾಸರು ತಮ್ಮ ಯಜಮಾನರಿಗೆ ಗೌರವವನ್ನು ಕೊಡದೆ ಅವರಿಗೆ ವಿರುದ್ಧವಾಗಿ ತಿರುಗಿಬಿದ್ದರೆ ಅದರ ಪರಿಣಾಮ ಇದುವೇ ಆಗಿರುತ್ತದೆ. ಯಾಕಂದರೆ ಕೆಲವು ಅವಿಶ್ವಾಸಿಗಳು ಕ್ರೈಸ್ತತ್ವದಲ್ಲಿ ಅಗೌರವ ಮತ್ತು ಎದುರುಬೀಳುವಿಕೆ ಸಾಮಾನ್ಯವಾಗಿದೆ ಎಂದು ಯೋಚಿಸುವರು ಮತ್ತು ಕ್ರೈಸ್ತ ಸೇವಕರು ಹಾಗೂ ದಾಸರು ಆರಾಧಿಸುವ ದೇವರ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಾರೆ.
**2**

**6:2** ಕ್ರೈಸ್ತ ಸೇವಕರು ಅಥವಾ ದಾಸರು ನಂಬಿಕೆಯುಳ್ಳವರಾದ ತಮ್ಮ ಯಜಮಾನರು ಒಳ್ಳೇಯವರು, ಕರುಣೆಯುಳ್ಳವರಾಗಿ ತಮ್ಮನ್ನು ದುರುಪಯೋಗಪಡಿಸಿಕೊಳ್ಳಲು ಪ್ರಯತ್ನಿಸುವರು ಹಾಗೂ ತಮ್ಮ ಕಾರ್ಯವನ್ನು ಸರಿಯಾಗಿ ಮಾಡುವದಿಲ್ಲ ಎಂದು ಯೋಚಿಸುತ್ತಾರೆ. ಯಾವುದೇ ಕ್ರೈಸ್ತನು ಯಾವುದೇ ರೀತಿಯ ಕೆಲಸದಲ್ಲಿದ್ದರೂ ಈ ರೀತಿಯ ಕಾರ್ಯಗಳು ಅಯೋಗ್ಯವಾದವುಗಳಾಗಿವೆ.

*"ಸಹೋದರರು"*– ಯಜಮಾನನು ಮತ್ತು ದಾಸನು ಇಬ್ಬರೂ ಯೇಸು ಕ್ರಿಸ್ತನಲ್ಲಿ ನಂಬಿಕೆಯುಳ್ಳವರಾಗಿದ್ದರೆ ಅವರು ಆತ್ಮೀಕ ಸಹೋದರರಾಗುತ್ತಾರೆ.

*"ಪ್ರಿಯರು"*– ಯಜಮಾನರಿಗೆ ತಮ್ಮ ಸೇವಕರನ್ನು ಪ್ರೀತಿಸಲು ನಿಜವಾಗಿಯೂ ಸಾಧ್ಯವೇ? ಹೌದು, ಯೇಸು ಕ್ರಿಸ್ತನಲ್ಲಿ ಅದು ಸಾಧ್ಯ – ಗಲಾ 3:28; ಕೊಲೊ 3:11. ಒಬ್ಬರನ್ನೊಬ್ಬರು ಪ್ರೀತಿಸಿರಿ (ಯೋಹಾನ 13:34) ಎಂಬ ಆಜ್ಞೆಯನ್ನು ಯೇಸು ಕ್ರಿಸ್ತನು ಜೀವನದ ಎಲ್ಲಾ ಪರಿಸ್ಥಿತಿಗಳಲ್ಲಿರುವ ಎಲ್ಲಾ ವಿಶ್ವಾಸಿಗಳಿಗೂ ಕೊಟ್ಟಿದ್ದಾನೆ. **3**

**6:3** *"ಯಾವನಾದರೂ ಬೇರೆ"*– 1:3,10,11; 4:1 ರೊಂದಿಗೆ ಹೋಲಿಸಿ ನೋಡಿರಿ. ಇಲ್ಲಿ ಪೌಲನು ಕೇವಲ ನಾಮಧ್ಯೇಯ ಕ್ರೈಸ್ತರಾಗಿರುವವರ ಬಗ್ಗೆ ಮಾತನಾಡುತ್ತಾ ಇದ್ದಾನೆ, ಆದರೆ ಇದು ಇತರರಿಗೂ ಅನ್ವಯವಾಗುತ್ತದೆ. ಇಲ್ಲಿ ಅವನು ಮತ್ತೊಮ್ಮೆ ಯೇಸು ಕ್ರಿಸ್ತನು ಅಪೊಸ್ತಲರಿಗೆ ಪ್ರಕಟಪಡಿಸಿರುವ ಸತ್ಯಗಳ ಪ್ರಾಮುಖ್ಯತೆಯನ್ನು ತಿಳಿಯಪಡಿಸುತ್ತಾ ಇದ್ದಾನೆ.

ಕೆಲವರು ನಮ್ಮ ಬುದ್ಧಿವಂತಿಕೆ ಮತ್ತು ತಿಳುವಳಿಕೆ ನಾವು ಸತ್ಯವೇದದ ಈ ಸಿದ್ಧಾಂತಗಳನ್ನು ನಂಬದಂತೆ ನಮ್ಮನ್ನು ತಡೆಯುತ್ತಿವೆ ಎಂಬದಾಗಿ ಹೇಳುತ್ತಾರೆ. ಮಾನವರು ಯೇಸು ಕ್ರಿಸ್ತನ ಸತ್ಯವನ್ನು ನಿರಾಕರಿಸಲು ನಿಜವಾದ ಕಾರಣ ಏನೆಂದರೆ ಅವರು ಬಹಳವಾಗಿ ತಿಳಿದುಕೊಂಡಿದ್ದಾರೆ ಎಂಬದಲ್ಲ ಬದಲಾಗಿ ಅವರು ತಿಳಿದುಕೊಂಡಿರುವದು ಸ್ವಲ್ಪವೇ ಆಗಿದೆ. ಅವರು ಹೆಚ್ಚು ವಿದ್ಯಾವಂತರಾಗಿರಬಹುದು, ಆದರೆ ಆತ್ಮೀಕ ವಿಷಯಗಳಲ್ಲಿ ಅವರಿಗೆ ಅನುಭವವಾಗಲಿ ಅಥವಾ ತಿಳುವಳಿಕೆಯಾಗಲಿ ಇಲ್ಲ. ಅವರು ಕತ್ತಲೆಯಲ್ಲಿ ಮತ್ತು ಮುಗ್ಧತೆಯಲ್ಲಿ ಇದ್ದಾರೆ – ಯೋಹಾನ 3:1,9,20; 1 ಕೊರಿಂಥ 1:18-22; 2 ಕೊರಿಂಥ 4:4; ಎಫೆ 4:18. ಆದರೆ ಅವರಲ್ಲಿ ಜ್ಞಾನದ ಆರಂಭವೇ ಇಲ್ಲವಾದರೂ (ಜ್ಞಾನೋ 1:7) ಅವರು ಹೆಚ್ಚಳಪಡುತ್ತಾರೆ ಮತ್ತು ತಾವೇ ಬುದ್ಧಿವಂತರೆಂದು ಯೋಚಿಸುತ್ತಾರೆ. 4

**6:4** *"ಅಸ್ವಸ್ಥವಾದ ಆಸಕ್ತಿ"*– ಪೌಲನು ಆತ್ಮೀಕವಾಗಿ ಅನಾರೋಗ್ಯದಲ್ಲಿರುವ ಜನರ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ ಇದ್ದಾನೆ. ತಮ್ಮನ್ನು ಗುಣಪಡಿಸುವ ದೇವರ ಸತ್ಯವನ್ನು ಅಂಗೀಕರಿಸುವ ಬದಲು ಅದಕ್ಕೆ ವಿರುದ್ಧವಾಗಿ ತಾವು ಹೋರಾಡಲು ಸಿದ್ಧರಾಗಿರುವದನ್ನು ತೋರಿಸಿಕೊಳ್ಳುತ್ತಾರೆ. 5

**6:5** *"ಬುದ್ಧಿಗೆಟ್ಟ ಮನಸ್ಸುಗಳು"*– 2 ತಿಮೊ 3:8. ದೇವರ ಸತ್ಯವನ್ನು ವಿರೋಧಿಸುವ ಮನಸ್ಸು ಆತ್ಮೀಕ ವಿಷಯಗಳ ಬಗ್ಗೆ ಸರಿಯಾದ ಆಲೋಚನೆ ಮಾಡುವದಿಲ್ಲ. ನೂತನ ಮನಸ್ಸು ಯೇಸು ಕ್ರಿಸ್ತನು ನಮಗೆ ಕೊಡುವ ದೊಡ್ಡ ಆಶೀರ್ವಾದಗಳಲ್ಲಿ ಒಂದಾಗಿದೆ (ರೋಮಾ 12:2; ಕೊಲೊ 3:10).

*"ಸತ್ಯವಿಹೀನರು"*– ಸತ್ಯವು ಅವರ ಕಣ್ಣೆದುರಿಗೇ ಇತ್ತು. ಅವರು ಅದನ್ನು ಕೇಳಿಸಿಕೊಂಡಿದ್ದರು ಮತ್ತು ನಾವು ಅದನ್ನು ನಂಬುತ್ತೇವೆ ಎಂದು ಹೇಳಿದ್ದರು. ಆದರೆ ಸೈತಾನನು ತಮ್ಮ ಮನಸ್ಸುಗಳಿಂದ ಸತ್ಯವನ್ನು ತೆಗೆದುಹಾಕಲು ಅವರು ಅನುಮತಿಸಿದ್ದರು. ಮತ್ತಾಯ 13:18-19 ರೊಂದಿಗೆ ಹೋಲಿಸಿ ನೋಡಿರಿ. ತಮ್ಮನ್ನು ಕ್ರೈಸ್ತರೆಂದು ಕರೆದುಕೊಳ್ಳುವ ಕೆಲವರು ಯಾವ ರೀತಿ ತಮ್ಮ ಭ್ರಷ್ಟವಾದ ಮನಸ್ಸುಗಳನ್ನು ಪ್ರಕಟಪಡಿಸುತ್ತಾರೆ ಎಂಬದನ್ನು ಗಮನಿಸಿರಿ – ಅವರಿಗೆ ಕ್ರೈಸ್ತತ್ವವು ಹಣ ಸಂಪಾದನೆ ಅಥವಾ ಇತರೆ ಲಾಭಗಳನ್ನು ಪಡೆಯುವ ವೃತ್ತಿ ಮಾತ್ರವೇ ಆಗಿದೆ. ಅಪೊ 8:18-23; ಯೋಹಾನ 12:6; 2 ಪೇತ್ರ 2:15; ಯೂದ 11 ನೋಡಿರಿ. ತಮಗಿರುವ ಎಲ್ಲವುಗಳನ್ನು ತ್ಯಜಿಸುವ ಬದಲು (ಲೂಕ 14:25-27,33; ಫಿಲಿಪ್ಪಿ 3:8) ಯೇಸು ಕ್ರಿಸ್ತನ ಜನರಿಂದ ಸಾಧ್ಯವಾದಷ್ಟು

ಕಾರ್ಯಗಳನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಾರೆ. ಸಭೆಗಳಲ್ಲಿರುವ ಮತ್ತು ಕ್ರೈಸ್ತ ಸಂಸ್ಥೆಗಳಲ್ಲಿರುವ ಜನರು ಈ ರೀತಿಯ ಮನೋಭಾವನೆಯನ್ನು ತೋರುವದು ಅತ್ಯಂತ ಘೋರವಾದ ಸಂಗತಿಯಾಗಿದೆ. ಕೆಲವರು ಸುಳ್ಳು ಹೇಳಲು, ಮೋಸ ಮಾಡಲು ಮತ್ತು ಹಣ ಸಂಪಾದನೆ ಮಾಡಲು ವಂಚನೆ ಮಾಡುತ್ತಾರೆ ಅಥವಾ ಕದ್ದುಕೊಳ್ಳಲು ಮುಂದಾಗುತ್ತಾರೆ. (ಒಂದುವೇಳೆ ಅವರಿಗೆ ಗೊತ್ತಿದ್ದರೂ) ಸುಳ್ಳುಗಾರನಾಗಿರುವದಕ್ಕಿಂತಲೂ ಬಡವನಾಗಿರುವದು ಉತ್ತಮ (ಜ್ಞಾನೋ 19:22) ಎಂಬದನ್ನೇ ಅವರು ಮರೆತುಹೋಗಿದ್ದಾರೆ. **6**

**6:6** ಫಿಲಿಪ್ಪಿ 4:11-12; ಇಬ್ರಿ 13:5. ಯೇಸು ಕ್ರಿಸ್ತನ ವಿಶ್ವಾಸಿಗಳು ಬೌತಿಕ ವಿಷಯಗಳಲ್ಲಿ ಮಾತ್ರವಲ್ಲ ಆತ್ಮೀಕ ವಿಷಯಗಳಲ್ಲಿ ಐಶ್ವರ್ಯವಂತರಾಗಲು ಬಯಸಬೇಕು. ಕೇವಲ ಇವುಗಳಲ್ಲಿ ಮಾತ್ರವೇ ಅವರಿಗೆ ನಿತ್ಯವಾದ ಲಾಭಗಳು ದೊರೆಯುತ್ತವೆ (ಮತ್ತಾಯ 6:19-21). ದೇವರಲ್ಲಿನ ಭರವಸೆ ಮತ್ತು ಆತ್ಮವಿಶ್ವಾಸದ ಫಲ ಸಂತುಷ್ಟಿಯಾಗಿದೆ. ಸಂತುಷ್ಟಿಯ ಮಾರ್ಗವೇನೆಂದರೆ ನಮಗೆ ಯಾವುದು ಉತ್ತಮವಾಗಿದೆಯೋ ಆ ಸ್ಥಳದಲ್ಲಿ, ಸ್ಥಾನದಲ್ಲಿ ಮತ್ತು ಪರಿಸ್ಥಿತಿಯಲ್ಲಿ ದೇವರು ನಮ್ಮನ್ನು ಇರಿಸಿದ್ದಾನೆ ಹಾಗೂ ನಮಗೆ ಏನಿರಬೇಕೆಂದು ಆತನು ಯೋಚಿಸಿದ್ದಾನೋ ಅದನ್ನೇ ಕೊಟ್ಟಿದ್ದಾನೆ, ಆದ್ದರಿಂದ ಆತನು ನನಗೆ ಯಾವುದನ್ನೂ ಹೆಚ್ಚು ಮಾಡಿಲ್ಲ ಹಾಗೆಯೇ ಕಡಿಮೆಯೂ ಮಾಡಿಲ್ಲ ಎಂಬದನ್ನು ನಂಬುವದಾಗಿದೆ. ಸಂತುಷ್ಟಿಯು ನಮ್ಮನ್ನು ಆರೋಪ ಮಾಡದಂತೆ ಮತ್ತು ಅತಿಆಸೆಯ ಬಯಕೆಗಳ ಹಿಂದೆ ಹೋಗದಂತೆ ಮಾಡುತ್ತದೆ (ಅವುಗಳು ವಿಗ್ರಹಾರಾಧನೆಗೆ ಸಮಾನವಾಗಿವೆ – ಎಫೆ 5:5; ಕೊಲೊ 3:5). ಬೌತಿಕ ಕಾರ್ಯಗಳು ನಮ್ಮ ಮೇಲೆ ಆಳ್ವಿಕೆ ಮಾಡದಂತೆ ಮಾಡುತ್ತದೆ. ಸಂತುಷ್ಟಿಯು ಯೇಸು ಕ್ರಿಸ್ತನ ಸೇವಕನಲ್ಲಿರಬೇಕಾದ ಅತ್ಯಂತ ಪ್ರಾಮುಖ್ಯವಾದ ಗುಣವಾಗಿದೆ. ಸಂತುಷ್ಟರಾಗಿರಲು ನಿರಾಕರಿಸುವದು ನಮ್ಮ ವಿಷಯದಲ್ಲಿರುವ ದೇವರ ಮಾರ್ಗಗಳು ಮತ್ತು ಆತನ ಸ್ವಭಾವವನ್ನು ಟೀಕಿಸುವದಕ್ಕೆ ಸಮಾನವಾಗಿದೆ. ಅದು ದೇವರಿಗೆ ವಿರುದ್ಧವಾಗಿ ಗುಣಗುಟ್ಟುವ ಪಾಪಕ್ಕೆ ನಮ್ಮನ್ನು ನಡೆಸುತ್ತದೆ. ವಿಮೋ 14:11-12; 15:22-24; 16:2-3,8; ಸಂಖ್ಯಾ 14:3 ರೊಂದಿಗೆ ಹೋಲಿಸಿ ನೋಡಿರಿ. **7**

**6:7** ಯೋಬ 1:21; ಕೀರ್ತನೆ 49:16-20; ಪ್ರಸಂಗಿ 5:15. ನಾವು ಭೋಲೋಕದಲ್ಲಿ ಜೀವಿಸುವ ಸಮಯದಲ್ಲಿ ಕೂಡಿಡಬಹುದಾದ ಕಾರ್ಯಗಳು ನಮಗಿಂತ ಮೊದಲು ಪರಲೋಕಕ್ಕೆ ಕಳುಹಿಸುವ ಕಾರ್ಯಗಳೇ ಆಗಿವೆ (ಮತ್ತಾಯ 6:19-21). **8**

**6:8** ಪೌಲನ ಮಾತಿನ ಅರ್ಥ ಜೀವನಕ್ಕೆ ಅತ್ಯಂತ ಪ್ರಾಮುಖ್ಯವಾಗಿರುವ ಕಾರ್ಯಗಳು. ಇಲ್ಲಿ ಅವನು ಒಬ್ಬನ ಸ್ವಂತ ಮನೆಯ ಬಗ್ಗೆಯೂ ಮಾತನಾಡಿಲ್ಲ – ಇದಕ್ಕೆ ಕಾರಣ ಒಬ್ಬನು ಸ್ವಂತ ಮನೆಯಿಲ್ಲದೆಯೇ ಭೂಲೋಕದಲ್ಲಿ ತನ್ನ ಜೀವಿತವನ್ನು ಕಳೆಯಬಹುದಾಗಿದೆ. 9

**6:9** ಜನರು (ಕೆಲವು ಕ್ರೈಸ್ತರೂ ಸೇರಿ) ಹಣ ಸಂಪಾದನೆಗಾಗಿ ಮುಂದಾಗುವದು ಅತ್ಯಂತ ಬುದ್ಧಿವಂತಿಕೆಯ ಕಾರ್ಯ ಎಂದು ಯೋಚಿಸುತ್ತಾರೆ. ಆದರೆ ಅಂಥವರು ಘೋರವಾದ ವಂಚನೆಗೆ ಒಳಗಾಗಿದ್ದಾರೆ ಮತ್ತು ತಮ್ಮನ್ನು ನಾಶನಕ್ಕೆ ನಡೆಸುವ ಮಾರ್ಗದಲ್ಲಿದ್ದಾರೆ. ಐಶ್ವರ್ಯದ ಬಯಕೆ ಸೈತಾನನು ಹಾಕಿರುವ ಬಲೆಯಾಗಿದ್ದು, ನಮ್ಮನ್ನು ಹಾಳುಮಾಡಲು ಅವನು ಬರಮಾಡುವ ಶೋಧನೆಯಾಗಿದೆ. ಈ ಬಯಕೆ ಎಂದಿಗೂ ಸಂತುಷ್ಟಿ ಸಿಗುವದಿಲ್ಲ, ಬದಲಾಗಿ ಆಸ್ತಿ ಹೆಚ್ಚಾದಂತೆ ಹೆಚ್ಚಾಗುತ್ತದೆ ಮತ್ತು ಕಡೆಯಲ್ಲಿ ನಾಶನಕ್ಕೆ ನಡೆಸುತ್ತದೆ (ಮತ್ತಾಯ 7:13; 2 ಥೆಸ 1:8-9; ಕೀರ್ತನೆ 49:20; 73:18-19). ಇದರ ವಿಷಯವಾಗಿ ಸತ್ಯವೇದದ ಕೆಲವು ಉದಾಹರಣೆಗಳನ್ನು ಗಮನಿಸಿರಿ – ಬಿಳಾಮನು (2 ಪೇತ್ರ 2:15), ಗೆಹಜಿ (2 ಅರಸು 5:20-27), ಯೂದ (ಮತ್ತಾಯ 26:14-16; ಯೋಹಾನ 12:4-6). ಅವರಂತೆಯೇ ನಾವೂ ಆಗಬೇಕೇ? ಒಂದುವೇಳೆ ಬೇಡವೆಂದರೆ, ಅವರಿಗೆ ಬಂದಂಥ ಬಯಕೆಗಳು ನಮ್ಮ ಮೇಲೆ ಆಳ್ವಿಕೆ ಮಾಡಲು ಅವಕಾಶ ಕೊಡದೆ ಇರೋಣ. 10

**6:10** ಹಣದಾಸೆಯು ಸಕಲವಿಧವಾದ ಕೆಟ್ಟತನಗಳಿಗೆ ಮೂಲವಾಗಿದೆ ಯಾಕಂದರೆ ಅದು ನಮ್ಮನ್ನು ದೇವರು ಹಾಗೂ ಆತ್ಮೀಕ ವಿಷಯಗಳಿಂದ ತಿರುಗಿಸಿ ಬೌತಿಕ ವಿಷಯಗಳ ಕಡೆಗೆ ನಡೆಸುತ್ತದೆ ಮತ್ತು ಅವುಗಳು ನಮ್ಮ ಮೇಲೆ ಅಧಿಕಾರ ನಡೆಸುವಂತೆ ಮಾಡುತ್ತದೆ. ಮತ್ತಾಯ 6:22-24 ನೋಡಿರಿ. ಹಣದಾಸೆಯು ನಿಜವಾಗಿಯೂ ದೇವರ ಮೇಲೆ ದ್ವೇಷವನ್ನು ಹುಟ್ಟಿಸುತ್ತದೆ. ಒಂದುವೇಳೆ ನಾವು ಮತ್ತಾಯ 22:37 ರ ಆಜ್ಞೆಯನ್ನು ಪಾಲಿಸುವದಾದರೆ ನಮ್ಮ ಹೃದಯಗಳಲ್ಲಿ ಹಣದಾಸೆಗೆ ಯಾವುದೇ ಅವಕಾಶ ಇರುವದಿಲ್ಲ. ಮತ್ತೊಂದು ಕಡೆ ಒಂದುವೇಳೆ ನಾವೇನಾದರೂ ಹಣದಾಸೆಯ ಹಿಡಿತಕ್ಕೆ ನಮ್ಮನ್ನು ಒಪ್ಪಿಸುವದಾದರೆ ದೇವರ ಮೇಲಿನ ಪ್ರೀತಿಗೆ ನಮ್ಮ ಹೃದಯಗಳಲ್ಲಿ ಯಾವುದೇ ಅವಕಾಶ ಇರುವದಿಲ್ಲ. ಪಾಪಗಳಲ್ಲಿ ಒಂದಾದ (ಬಹುಶಃ ಮೂಲ ಪಾಪವಾಗಿರುವ) ಹಣದಾಸೆಯು ಇಸ್ಕರಿಯೋತ ಯೂದನನ್ನು ದುಷ್ಟನನ್ನಾಗಿ ಮಾರ್ಪಡಿಸಿತು (ಯೋಹಾನ 6:70-71; 12:6; ಮತ್ತಾಯ 26:14-16). ಒಂದುವೇಳೆ ನಮಗೆ ಆತ್ಮೀಕವಾಗಿ ತಿಳುವಳಿಕೆಯಿದ್ದರೆ, ಏನಾದರೂ ಬುದ್ಧಿ ಇದ್ದರೆ, ಆ

ಮಾರ್ಗವನ್ನು ಅನುಸರಿಸಲು ಬಯಸುತ್ತೇವೆಯೇ?

*“ಕ್ರಿಸ್ತನಂಬಿಕೆಯನ್ನು ಬಿಟ್ಟು ಅಲೆದಾಡಿ”*– ವ 21; 1:19; 4:1,6; 5:8. ಯಾರಿಗೆ ಹಣ ದೇವರಾಗಿರುತ್ತದೆಯೋ ಅವರಿಗೆ ಯೇಸು ಕ್ರಿಸ್ತನನ್ನು ಹಿಂಬಾಲಿಸುವ ಯಾವ ಬಯಕೆಯೂ ಇರುವದಿಲ್ಲ, ಅವರು ತಮ್ಮ ಸ್ವಂತ ಮಾರ್ಗಗಳಲ್ಲಿ ಅಲೆದಾಡುವವರಾಗಿರುತ್ತಾರೆ.

*“ವೇದನೆಗಳಿಂದ ತಿವಿಸಿಕೊಳ್ಳುತ್ತಾರೆ”*– ಹಣದ ಹಿಂದೆ ಹೋಗುವದು ದುಃಖ ಮತ್ತು ದುರಂತದ ಹಿಂದೆ ಹೋಗುವದಕ್ಕೆ ಸಮಾನವಾಆಗಿದೆ. ಹಣ ತನ್ನನ್ನು ಪ್ರೀತಿಸುವವರಿಗೆ ಕೊಡುವ ಬಹುಮಾನಗಳು ಯಾವುವೆಂದರೆ ದುಃಖ, ಭ್ರಮೆ, ಅಸಮಾಧಾನ ಮತ್ತು ನಿತ್ಯವಾದ ನಷ್ಟ ಹಾಗೂ ನಾಶನ. ಯಾಕೋಬ 5:1-3; ಮತ್ತಾಯ 19:22; ಲೂಕ 6:24-25; 12:16-21; 16:19-31. **11**

**6:11** ಯೇಸು ಕ್ರಿಸ್ತನ ಪ್ರತಿಯೊಬ್ಬ ಸೇವಕ, ಪ್ರತಿಯೊಬ್ಬ ವಿಶ್ವಾಸಿ ಹಣ, ಆಸ್ತಿ ಹಿಂದೆ ಹೋಗುವ ಶೋಧನೆಯಿಂದ ದೂರವಿರಬೇಕು. ಒಂದುವೇಳೆ ಅವರು ದೂರವಿರದೆ ಹೋದರೆ ಖಂಡಿತವಾಗಿಯೂ ಸೈತಾನನ ಬಲೆಯೊಳಗೆ ಸಿಕ್ಕಿಬೀಳುವ ಸಾಧ್ಯತೆಯಿರುತ್ತದೆ (ವ 9). ನಾವೆಲ್ಲರೂ ಇವೆಲ್ಲವುಗಳನ್ನು ತ್ಯಜಿಸೋಣ ಮತ್ತು ಪೌಲನು ಇಲ್ಲಿ ಹೇಳಲಾಗಿರುವ ನಿಜವಾದ ನಿಕ್ಷೇಪಗಳ ಹಿಂದೆ ಹೋಗೋಣ – ದೇವರಾತ್ಮನು ಕೊಡುವ ಫಲಗಳು (ಗಲಾ 5:22-23). ಒಂದುವೇಳೆ ನಾವು ಹಾಗೆ ಮಾಡಿದರೆ ಜೀವನದ ಅವಶ್ಯಕತೆಗಳ ಬಗ್ಗೆ ಚಿಂತಿಸುವ ಅವಶ್ಯಕತೆ ಇರುವದಿಲ್ಲ (ಮತ್ತಾಯ 6:33; ಫಿಲಿಪ್ಪಿ 4:19) ಮತ್ತು ಇವುಗಳೊಂದಿಗೆ ಸಂತುಷ್ಟರಾಗಿರುತ್ತೇವೆ. **12**

**6:12** *“ಹೋರಾಟ”*– ಎಫೆ 6:10-18; 1 ಕೊರಿಂಥ 9:26; 2 ತಿಮೊ 4:7.

*“ಹಿಡಿದುಕೊಳ್ಳಿರಿ”*– ದೇವರು ನಿತ್ಯಜೀವ ನಮ್ಮ ಕೈಗೆ ದೊರೆಯುವ ಹಾಗೆಯೇ ಇಟ್ಟಿದ್ದಾನೆ ಆದರೆ ಅವುಗಳನ್ನು ನಾವೇ ನಮಗಾಗಿ ತೆಗೆದುಕೊಳ್ಳಬೇಕು. ನಿಜವಾದ ಕ್ರೈಸ್ತೀಯ ಜೀವಿತವು ನಿಜವಾದ ಜೀವಿತವಾಗಿದೆಯೇ ಹೊರತು ಯಾವುದೇ ಉದ್ದೇಶವಿಲ್ಲದೆ ಅಸ್ತಿತ್ವದಲ್ಲಿ ಇಲ್ಲ. ದೇವರು ನಮಗೆ ಯೇಸು ಕ್ರಿಸ್ತನಲ್ಲಿ ಅನೇಕ ಆಶೀರ್ವಾದಗಳನ್ನು ಕೊಟ್ಟಿದ್ದಾನೆ (ಎಫೆ 1:3) ಆದರೆ ನಾವು ಅವುಗಳನ್ನು ನಮ್ಮದೆಂದು ತಿಳಿದುಕೊಳ್ಳಬೇಕು, ನಮ್ಮದಾಗಿ ಮಾಡಿಕೊಳ್ಳಬೇಕು ಮತ್ತು ಅವುಗಳನ್ನು ಉಪಯೋಗ ಮಾಡಿಕೊಳ್ಳಬೇಕು.

*“ನಿತ್ಯಜೀವ”*– ವ 19. ಯೋಹಾನ 3:16 ರ ನೋಟ್ ನೋಡಿರಿ.

*“ಒಳ್ಳೆಯ ಪ್ರತಿಜ್ಞೆ”*– ಮತ್ತಾಯ 10:32-33; ರೋಮಾ 10:9-10; 1 ಯೋಹಾನ 4:15 ರೊಂದಿಗೆ ಹೋಲಿಸಿ ನೋಡಿರಿ. **13**

**6:13** 5:21.

*“ಜೀವಾಧಾರಕನು”*– ಅಪೊ 17:25.

*“ಪಿಲಾತನು”*– ಮತ್ತಾಯ 27:2. ಯೋಹಾನ 18:36-37 ರಲ್ಲಿ ಯೇಸು ಕ್ರಿಸ್ತನು ಕೊಟ್ಟಿರುವ ಒಳ್ಳೆಯ ಪ್ರತಿಜ್ಞೆಯನ್ನು ನೋಡಿರಿ. **14**

**6:14** *“ವಿಧಿ”*– ಇಲ್ಲಿ ಪೌಲನ ಮಾತುಗಳು ಏನೆಂದರೆ ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ನೇಮಿಸಿರುವ ಸಂಪೂರ್ಣವಾದ ಜೀವನವಾಗಿದೆ. ಖಂಡಿತವಾಗಿಯೂ ಇದುವೇ 11,12 ವಚನಗಳ ಧ್ಯೇಯವಾಗಿದೆ.

*“ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವ ಕಾಲ”*– ಯೇಸು ಕ್ರಿಸ್ತನ ಎರಡನೇ ಬರೋಣ (2 ತಿಮೊ 4:1,8; ತೀತ 2:13; ಇಬ್ರಿ 9:28; ಮತ್ತಾಯ 24:30-31; ಅಪೊ 1:11). **15**

**6:15** *“ತನ್ನ ಕ್ಲುಪ್ತ ಸಮಯದಲ್ಲಿ”*– ಮತ್ತಾಯ 24:36. ಗಲಾ 4:4; ಯೋಹಾನ 7:30 ರೊಂದಿಗೆ ಹೋಲಿಸಿ ನೋಡಿರಿ. ದೇವರು ತಾನು ಮಾಡುವ ಪ್ರತಿಯೊಂದು ಕೆಲಸಗಳಿಗೂ ಕ್ಲುಪ್ತವಾದ ಸಮಯವನ್ನು ಹೊಂದಿದ್ದಾನೆ. ಇಲ್ಲಿ ಪೌಲನು ದೇವರನ್ನು “ಒಬ್ಬನೇ” ಏಕಾಧಿಪತಿಯಾಗಿರುವ “ರಾಜಾಧಿರಾಜನು ಮತ್ತು ಕರ್ತರ ಕರ್ತನು” ಎಂದು ಕರೆದಿದ್ದಾನೆ. ಪ್ರಕ 1:5 ಹೇಳುವದೇನೆಂದರೆ ಯೇಸು ಕ್ರಿಸ್ತನು ಭೂಲೋಕದ ಅರಸರ ಅಧಿಪತಿಯಾಗಿದ್ದಾನೆ ಮತ್ತು ಪ್ರಕ 19:16 ಆತನನ್ನು “ರಾಜಾಧಿರಾಜನು ಮತ್ತು ಕರ್ತಾಧಿ ಕರ್ತನು” –ಎಂದು ಕರೆಯುತ್ತದೆ. ಇಲ್ಲಿ ಏನಾದರೂ ವಿರೋಧಗಳು ಇವೆಯೇ? ಖಂಡಿತವಾಗಿಯೂ ಇಲ್ಲ. ಸ್ಪಷ್ಟವಾದ ಅರ್ಥವೇನೆಂದರೆ ಯೇಸು ಕ್ರಿಸ್ತನು ದೇವರ ಸಾರೂಪ್ಯವಾಗಿದ್ದಾನೆ. ಯೋಹಾನ 1:1,14; ಫಿಲಿಪ್ಪಿ 2:6 ನೋಡಿರಿ. **16**

**6:16** 1:17 ನೋಡಿರಿ.

*“ಬೆಳಕು”*– 1 ಯೋಹಾನ 1:5; ಯೋಹಾನ 1:4-5. **17**

**6:17** ಐಶ್ವರ್ಯವಂತರು ನಮಗೆ ದೇವರ ಅವಶ್ಯಕತೆಯಿಲ್ಲ ಎಂದು ಯೋಚಿಸುವ ತಪ್ಪಿಗೆ

ಒಳಗಾಗುವಂಥ ಸಾಧ್ಯತೆ ಬಹಳವಿದೆ. ಕೀರ್ತನೆ 49:6; 73:3-12 ರೊಂದಿಗೆ ಹೋಲಿಸಿ ನೋಡಿರಿ.

*"ಅಸ್ಥಿರವಾದ ಐಶ್ವರ್ಯ"*– ಜ್ಞಾನೋ 23:4-5; 28:20. ಮಾನವನು ಏನೆಲ್ಲಾ ಸಂಪಾದನೆ ಮಾಡಲು ದೇವರು ಅವನನ್ನು ಬಲಪಡಿಸುತ್ತಾನೋ ಅವುಗಳನ್ನೆಲ್ಲಾ ತೆಗೆದುಕೊಳ್ಳಲು ಆತನು ಶಕ್ತನಾಗಿದ್ದಾನೆ. ದೇವರ ವಿಷಯದಲ್ಲಿ ವ್ಯತ್ಯಾಸವಾಗಿ ನಡೆದುಕೊಳ್ಳುವವರಿಗೆ ಇಂಥ ಫಲಿತಾಂಶ ನಿಶ್ಚಯವಾಗಿಯೂ ಎದುರಾಗುತ್ತದೆ.

*"ನಮಗೆ ಹೇರಳವಾಗಿ ದಯಪಾಲಿಸುತ್ತಾನೆ"*– 2 ಕೊರಿಂಥ 9:8; ಫಿಲಿಪ್ಪಿ 4:19. ದೇವರು ತನಗಿರುವದನ್ನು ಬಿಗಿಯಾಗಿ ಹಿಡಿದುಕೊಳ್ಳುವಂಥ ಜಿಪುಣನಲ್ಲ. ನಮ್ಮ ನಿರೀಕ್ಷೆ ಮತ್ತು ಭರವಸೆ ಆತನಲ್ಲಿಯೇ ಇರಬೇಕೇ ಹೊರತು ನಮ್ಮ ಕಣ್ಣುಗಳಿಗೆ ಕಾಣಿಸುವ ಜನರು ಅಥವಾ ಭೌತಿಕ ಕಾರ್ಯಗಳ ಮೇಲೆ ಇರಬಾರದು.

*"ಅನುಭೋಗಕ್ಕೋಸ್ಕರ"*– ಪ್ರಸಂಗಿ 2:24-26; ಅಪೊ 14:17. ದೇವರು ತಾನು ಜನರಿಗೆ ಕೊಡುವವುಗಳನ್ನು ಅವರು ಅನುಭೋಗಿಸಬೇಕೆಂದು ಬಯಸುತ್ತಾನೆ ಮತ್ತು ಅವುಗಳನ್ನು ಅವರು ಅನುಭೋಗಿಸುವದು ತಪ್ಪು ಎಂಬದಾಗಿ ಆತನು ಹೇಳುವದಿಲ್ಲ. ಇದರ ಅರ್ಥ ಇತರರು ಬಡತನದಲ್ಲಿ ಜೀವಿಸುವಾಗ ನಾವು ಐಶ್ವರ್ಯದಲ್ಲಿ ಜೀವಿಸಬೇಕು ಎಂಬದಲ್ಲ - 2 ಕೊರಿಂಥ 8:13-14. **18-19**

**- 6:18-19** ಮತ್ತಾಯ 19:21; 6:19-20; ಲೂಕ 14:33. **18**

**6:18** *"ಸತ್ಕಾರ್ಯಗಳಲ್ಲಿ ಐಶ್ವರ್ಯವಂತರು"*– ಈ ವಾಕ್ಯಗಳಲ್ಲಿ ನಾವು ನಿಜವಾದ ಆತ್ಮೀಕ ಐಶ್ವರ್ಯವಂತಿಕೆಯನ್ನು ನೋಡಬಹುದು. ಲೂಕ 12:21 ರೊಂದಿಗೆ ಹೋಲಿಸಿ ನೋಡಿರಿ. ಯಾರೆಲ್ಲಾ ತಮ್ಮ ಐಶ್ವರ್ಯವನ್ನು ಕೇವಲ ತಮಗಾಗಿ ಮಾತ್ರವೇ ಉಪಯೋಗಿಸಿಕೊಳ್ಳುತ್ತಾರೋ ಅವರು ನಿಜವಾಗಿಯೂ ಅವುಗಳನ್ನು ಬಿಸಾಡುವವರಾಗಿದ್ದಾರೆ.

*"ಪಾಲು"*– ಈಗ ನಾವು ಮಾಡುವಂಥದ್ದು, ಈಗ ನಾವು ಕೊಡುವಂಥದ್ದು ನಮ್ಮ ನಿತ್ಯವಾದ ಭವಿಷ್ಯದ ಮೇಲೆ ಅಗಾಧವಾದ ಪ್ರಭಾವವನ್ನು ಬೀರುತ್ತದೆ. ಮತ್ತಾಯ 25:19; ಲೂಕ 19:15 ರೊಂದಿಗೆ ಹೋಲಿಸಿ ನೋಡಿರಿ. ತಮ್ಮ ಹಣದಿಂದ ಅನೇಕ ಒಳ್ಳೆಯ ಕಾರ್ಯಗಳನ್ನು ಮಾಡಲು ಅವಕಾಶವಿದ್ದರೂ ಹಣವಿರುವವರು ತಮಗಾಗಿ ಅಥವಾ ನಿಜವಾದ ಮೌಲ್ಯ ಇಲ್ಲದವುಗಳಿಗಾಗಿ ಖರ್ಚು ಮಾಡುವದು ನಿಜವಾಗಿಯೂ ದುಃಖದ ವಿಷಯವಾಗಿದೆ. 2

ಕೊರಿಂಥ 9:15 ರಲ್ಲಿ ಕೊಡುವದರ ಬಗ್ಗೆ ಕೊಡಲಾಗಿರುವ ನೋಟ್ ನೋಡಿರಿ. **20**

**6:20** *"ನಿನ್ನ ವಶಕ್ಕೆ ಕೊಟ್ಟಿರುವದನ್ನೇ ಕಾಪಾಡು"*– 2 ತಿಮೊ 2:14. ಸುವಾರ್ತೆಯ ವಿಷಯವಾಗಿ ದೇವರು ಪ್ರಕಟಿಸಿರುವ ಸತ್ಯಗಳ ಬಗ್ಗೆ ಪೌಲನು ಮಾತನಾಡುತ್ತಾ ಇದ್ದಾನೆ (1:11). ನಾವೆಲ್ಲರೂ ಇದಕ್ಕೆ ಹೆಚ್ಚಿನ ಮೌಲ್ಯವನ್ನು ಕೊಡಬೇಕು ಮತ್ತು ಸೈತಾನನಾಗಲಿ ಅಥವಾ ಬೇರೆ ಯಾರೇ ಆಗಲಿ ಅದನ್ನು ನಮ್ಮಿಂದ ತೆಗೆಯದಂತೆ ನೋಡಿಕೊಳ್ಳಬೇಕು.

*"ಸುಳ್ಳಾಗಿ ಹೇಳಿಕೊಳ್ಳುವ ಬೋಧನೆ"*– ವ 3,4; ಕೊಲೊ 2:8; 1 ಕೊರಿಂಥ 1:17-25. **21**

**6:21** *"ಅವಲಂಬಿಸಿ"*– ರೋಮಾ 1:22 ರೊಂದಿಗೆ ಹೋಲಿಸಿ ನೋಡಿರಿ. ಕೆಲವರು ತಾವು ಬಹಳ ಬುದ್ಧಿವಂತರೆಂದು ಯೋಚಿಸುತ್ತಾರೆ ಮತ್ತು ತಮಗೆ ಯೇಸು ಕ್ರಿಸ್ತನ ಸುವಾರ್ತೆಯ ಅವಶ್ಯಕತೆಯಿಲ್ಲ ಅಂದುಕೊಳ್ಳುತ್ತಾರೆ. ಅವರು ನಾಶನದ ಅಂಚಿನಲ್ಲಿದ್ದಾರೆ.

*"ನಂಬಿಕೆಯಿಂದ ಭ್ರಷ್ಟರಾಗಿದ್ದಾರೆ"*– ವ 10; 4:1.

*"ಕೃಪೆ"*– ದೇವರ ಕೃಪೆಯಿಂದ ಮಾತ್ರವೇ ಯೇಸು ಕ್ರಿಸ್ತನ ಸೇವಕರು ಈ ಪತ್ರದಲ್ಲಿ ಕೊಡಲಾಗಿರುವ ಸೂಚನೆಗಳನ್ನು ಅಭ್ಯಾಸ ಮಾಡಲು ಸಾಧ್ಯವಾಗುತ್ತದೆ.